# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ–33, ಶ್ರೀಪ್ಲವನಾಮ ಸಂವತ್ಸರ, ಮಾಘಮಾಸ, ಫೆಬ್ರವರಿ –2022, ಸಂಚಿಕೆ–11, ಪುಟಗಳು–28. ಬೆಲೆ ರೂ. – 15/–

## ಸನಾತನ ಧರ್ಮದ ಆಚಾರ್ಯರ ರಾಷ್ಟ್ರೀಯ ಸ್ಮಾರಕ ಪ್ರಧಾನಿಯಿಂದ ರಾಷ್ಟ್ರಕ್ಕೆ ಸಮರ್ಪಣೆ



**ಶ್ರೀ ಶಂಕರ ಭಗವತ್ಪಾದರು**
ಕೇದಾರನಾಥ, ಉತ್ತರಾಖಂಡ
ದಿನಾಂಕ : 06-11-2021

**ಶ್ರೀ ರಾಮಾನುಜಾಚಾರ್ಯರು**
ಹೈದರಾಬಾದ್, ತೆಲಂಗಾಣ
ದಿನಾಂಕ : 05-02-2022

# ಪೇಜಾವರ ಶ್ರೀ ಶ್ರೀಗಳಿಗೆ "ಪದ್ಮ ವಿಭೂಷಣ" ಪ್ರದಾನ



# ವಿಪ್ರ ವರೇಣ್ಯರಿಗೆ ಪದ್ಮಶ್ರೀ ಗೌರವ



ಶ್ರೀ ಹೆಚ್.ಆರ್. ಕೇಶವಮೂರ್ತಿ
ಖ್ಯಾತ ಗಮಕ ಕಲಾವಿದರು



ಡಾ॥ ಸುಬ್ಬಣ್ಣ ಐಪ್ಪನ್
ಅಂತಾರಾಷ್ಟ್ರೀಯ ಖ್ಯಾತಿಯ ಕೃಷಿ ವಿಜ್ಞಾನಿಗಳು

# ನೂತನ ಅಧ್ಯಕ್ಷರಿಂದ ವಿಧಿವತ್ತಾಗಿ ಅಧಿಕಾರ ಸ್ವೀಕಾರ



ನಡಾವಳಿ ಪುಸ್ತಕದಲ್ಲಿ ಸಹಿ



ಉದಕ ಶಾಂತಿ ಕಾರ್ಯಕ್ರಮದಲ್ಲಿ ವೈದಿಕರ ಸಮೂಹ



ದಿನಾಂಕ 26-01-2022ರಂದು
ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ
ನೂತನ ಅಧ್ಯಕ್ಷರಿಂದ ವೆಬ್‌ಸೈಟ್ ಉದ್ಘಾಟನೆ



ಪ್ರತಿಷ್ಠಿತ ಬೆಂಗಳೂರು ಗಾಯನ ಸಮಾಜದ 51ನೇ ಸಂಗೀತ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆಗೊಂಡ ಸುಪ್ರಸಿದ್ಧ ಹಿರಿಯ ಕಲಾವಿಮರ್ಶಕ ಡಾ॥ ಎಂ. ಸೂರ್ಯಪ್ರಸಾದ್ ರವರಿಗೆ ಸಮ್ಮೇಳನದಲ್ಲಿ ಸಂಗೀತ ಕಲಾರತ್ನ ಬಿರುದು-ಸನ್ಮಾನಗಳಿಂದ ಪುರಸ್ಕರಿಸಲಾಯಿತು. ಡಾ॥ ಎಂ. ಸೂರ್ಯಪ್ರಸಾದ್ ಅವರಿಗೆ ಮಹಾಸಭೆಯ ಹೃತ್ಪೂರ್ವಕ ಅಭಿನಂದನೆಗಳು



ನಾಡೋಜ
ಡಾ॥ ಮಹೇಶ್ ಜೋಷಿ
ಕನ್ನಡ ಸಾಹಿತ್ಯ ಪರಿಷತ್ತಿನ
ನೂತನ ಅಧ್ಯಕ್ಷರಾಗಿ ಆಯ್ಕೆ



ತ್ರಿವಿಕ್ರಮ ಜೋಷಿ ಅವರಿಗೆ
ಶ್ರೀ ಪುರಂದರ ಅನುಗ್ರಹ ಪ್ರಶಸ್ತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ, ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು :
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ :
**ಶ್ರೀಧರಮೂರ್ತಿ ಎಸ್.**

ಖಜಾಂಚಿ :
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ :
**ಡಾ॥ ಬಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು :
**ಡಾ॥ ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು :
**ಎಂ.ಕೆ. ಭಾಸ್ಕರರಾವ್**
**ಡಾ॥ ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು :
**ಜ್ಯೋತಿಷಿ ವಿ॥ ಡಾ॥ ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ.**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 9.30 ರಿಂದ 1.00
ಸಂಜೆ 4.30 ರಿಂದ 8.00
ಭಾನುವಾರ ಬೆಳಿಗ್ಗೆ 9.30 ರಿಂದ 1.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 050. ದೂ. : 26606061.

# ನಲ್ನುಡಿ

**ಶಮೋದಮಸ್ತಪಃ ಶೌಚಂ ಕ್ಷಾಂತಿರಾರ್ಜವಮೇವ ಚ ।**
**ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್ ॥** (ಗೀತೆ 18-42)

ಶಮ, ದಮ, ತಪಸ್ಸು, ಶುಚಿತ್ವ, ಕ್ಷಮೆ, ಸರಳತೆ, ಜ್ಞಾನ, ವಿಜ್ಞಾನ, ಆಸ್ತಿಕ ಬುದ್ಧಿ ಇವು ಬ್ರಾಹ್ಮಣರಿಗೆ ಪ್ರಕೃತಿಯಿಂದ ಬಂದಿರುವ ಕರ್ಮಗಳು. ಸಾತ್ವಿಕನಾದ ಬ್ರಾಹ್ಮಣನು ಇಲ್ಲಿ ವಿವರಿಸಿರುವಂತೆಯೇ ಜೀವನ ನಡೆಸುತ್ತಿರುತ್ತಾನೆ.

ತನ್ನ ಇಂದ್ರಿಯಗಳನ್ನು ವ್ಯರ್ಥವಾಗಿ ವಿಷಯ ಪ್ರಪಂಚಕ್ಕೆ ಅವನು ತೊಡಗಿಸದೇ ಆತ್ಮ ಸಂಯಮಿಯಾಗಿ ಬಾಳುತ್ತಿರುತ್ತಾನೆ. ಶರೀರೇಂದ್ರಿಯಗಳ ಹತೋಟಿಗಾಗಿ ಶಾರೀರಿಕ, ವಾಚಿಕ ಮತ್ತು ಮಾನಸಿಕ ತಪಸ್ಸನ್ನು ಆಚರಿಸುತ್ತಾನೆ. ಈ ಮೂಲಕ ತನ್ನ ವೀರ್ಯ, ತೇಜಸ್ಸು ಮತ್ತು ಅಂತಃಸತ್ವಗಳನ್ನು ಕಾಪಾಡಿಕೊಳ್ಳುತ್ತಾನೆ.

ಹೀಗೆ ಶಮ, ದಮ, ಸಹನೆ, ತಪಸ್ಸು, ಸರಳತೆ ಈ ಎಲ್ಲಾ ಶುದ್ಧ ಗುಣಗಳನ್ನು ಬೆಳೆಸಿಕೊಂಡಿರುವ ಆತನ ಮನಸ್ಸು ಶಾಸ್ತ್ರವನ್ನು ತಿಳಿಯುವುದಕ್ಕೆ ಪರಿಪಕ್ವವಾದುದು. ಅವನು ಈ ವಿಚಾರವನ್ನು ಗುರುಮುಖೇನ ಶ್ರದ್ಧೆಯಿಂದ ಕಲಿತು ಅದನ್ನು ನಿರಂತರವಾಗಿ ಮನನ ಮಾಡುತ್ತಾ ಕೊನೆಗೆ ಅನುಭವದಲ್ಲಿ ನಿಲ್ಲಿಸಿಕೊಳ್ಳುತ್ತಾನೆ.

ಮೇಲೆ ಹೇಳಿದ ಎಲ್ಲಾ ಶುದ್ಧ ಗುಣಗಳನ್ನು ಹೊಂದಲು ಮಾಡುವುದೇ ತಪಸ್ಸು. ತಪಸ್ಸೆಂದರೆ ಮುಖ್ಯವಾಗಿ ಶ್ರಮಪಡುವುದು, ಸಾಧನೆ ಮಾಡುವುದು ಎಂದರ್ಥ, ವ್ಯರ್ಥವಾಗಿ ಕ್ಲೇಶ ಪಡುವುದಲ್ಲ ಎಂದರ್ಥ.


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

ಆತ್ಮೀಯ ವಿಪ್ರಬಂಧುಗಳೇ,

ನಮಸ್ಕಾರ. ನೂತನ ಅಧ್ಯಕ್ಷರಾದ ಮಾನ್ಯ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ 'ವಿಪ್ರನುಡಿ' ಮಾಸಿಕ ಸಂಚಿಕೆ ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯು ಸರಿಸುಮಾರು ಒಂದು ಲಕ್ಷ ವಿಪ್ರ ಓದುಗರನ್ನು ಹೊಂದಿದೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತಿನ ಮಾಹಿತಿಯು ರಾಜ್ಯಾದ್ಯಂತ ವಿಪ್ರ ಕುಟುಂಬಗಳನ್ನು ತಲುಪುವುದು. ಆದ್ದರಿಂದ ತಾವು ಆದ್ಯತೆ ವಹಿಸಿ ಜಾಹೀರಾತನ್ನು ನೀಡಿ, ಮಹಾಸಭೆಯ ಅಭಿವೃದ್ಧಿಯಲ್ಲಿ ಮತ್ತು ವಿಪ್ರನುಡಿಯು ಆರ್ಥಿಕವಾಗಿ ಸ್ವಾವಲಂಬನೆ ಹೊಂದಲು ನೆರವಾಗಬೇಕೆಂದು ವಿನಂತಿ.

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | |
|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. 20,000/= |
| 3. | ಒಳ ಪುಟ (ವರ್ಣ) | .. | ರೂ. 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. 2,000/= |

ಜಾಹೀರಾತಿನ ಶುಲ್ಕವನ್ನು ಕೆಳಕಂಡ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಕೋರಿದೆ.
ಬ್ಯಾಂಕ್ ಹೆಸರು ಮತ್ತು ಶಾಖೆ : ಕರ್ನಾಟಕ ಬ್ಯಾಂಕ್ ಲಿ., ಬನಶಂಕರಿ 2ನೇ ಹಂತ
ಉಳಿತಾಯ ಖಾತೆ ಸಂಖ್ಯೆ : 1072500102058301
ಐ.ಎಫ್.ಎಸ್.ಸಿ ಕೋಡ್ : KARB0000107

ಸಂಚಾಲಕರು
ಜಾಹೀರಾತು ವಿಭಾಗ

Orchid Travel & Tours

# OUR OFFICE NETWORK :

**HO: # 98, 1st floor,**
**D.V.G. Road, Basavanagudi,**
**BANGALORE, India - 560004**
**Phone : +91 80 26617178**
**www.orchidtours.net**

## OUR TOURS :

Domestic Tours : Ahobilam |Explore Gujarat | Temple Triangle | Char Dham | Himachal Special | Pancha Dwaraka | Exclusive Rajasthan | Bhubaneshwar Puri Jagannathan | Andhra Pradesh Special |Andaman |

## INTERNATIONAL TOUR :

UK and Europe Tour | USA Tour with Bahamas Cruise | China-Hong Kong - Macau | Japan | Dubai - Abu Dhabi | Singapore and Malaysia | Cambodia and Thailand | Srilanka | Australia New Zealand |

# ಅಧ್ಯಕ್ಷರ ನುಡಿ



**ಆತ್ಮೀಯ ವಿಪ್ರ ಬಂಧುಗಳೇ,**

**ನಿಮ್ಮೆಲ್ಲರಿಗೂ ಹೊಸ ವರ್ಷ ಹಾಗೂ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.**

ನನ್ನನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷನಾಗಿ ಚುನಾಯಿಸಿರುವ ನಿಮ್ಮೆಲ್ಲರಿಗೂ ನನ್ನ ಕೃತಜ್ಞತೆಗಳು. ಈ ಅಧ್ಯಕ್ಷ ಪದವಿಯು "ಅಧಿಕಾರ" ವಾಗಿರದೆ ಒಂದು "ಜವಾಬ್ದಾರಿ" ಎಂದು ತಿಳಿದು ಬ್ರಾಹ್ಮಣ ಸಮಾಜದ ಸೇವೆಗೆ ಸಿಕ್ಕಿರುವ ಸುವರ್ಣಾವಕಾಶ ಎಂದೇ ನಾನು ಭಾವಿಸಿದ್ದೇನೆ. ಈ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಮಹಾಸಭೆ ರಾಜ್ಯಮಟ್ಟದಲ್ಲಿ ತ್ರಿಮತಸ್ಥ ಬ್ರಾಹ್ಮಣರನ್ನು ಒಗ್ಗೂಡಿಸಿ ಬ್ರಾಹ್ಮಣ ಸಮುದಾಯದ ನೋವು-ನಲಿವುಗಳಿಗೆ ಸ್ಪಂದಿಸುವ ಕೇಂದ್ರ ಸಂಸ್ಥೆಯಾಗಿ ಹೊರಹೊಮ್ಮುವಂತೆ ಮಾಡಲು ಸಂಕಲ್ಪಿಸಿದ್ದೇನೆ. ಈ ದಿಶೆಯಲ್ಲಿ ಯುವ ಸಮೂಹ ಸಂಘಟನೆಯಲ್ಲಿ ಹೆಚ್ಚಿನ ಮಟ್ಟದಲ್ಲಿ ತೊಡಗಿಸಿಕೊಳ್ಳುವಂತೆ ರೂಪುರೇಷೆಗಳನ್ನು ಸಿದ್ಧಪಡಿಸಿದೆ. ಅದರ ಫಲಶೃತಿಯೇ ನಿಮ್ಮ ಮುಂದಿರುವ ನವೀಕೃತ ಜಾಲತಾಣ, ಇಂದಿನ ವಿದ್ಯುನ್ಮಾನ ಯುಗದಲ್ಲಿ ಯಾವುದೇ ಸಂಘಟನೆಯ ಪ್ರಸ್ತುತತೆ ಹಾಗೂ ಬೆಳವಣಿಗೆ, ಆ ಸಂಘಟನೆ ಅಂತರ್ಜಾಲದಲ್ಲಿ ಹೇಗೆ ಲಭ್ಯವಾಗುತ್ತಿದೆ ಎಂಬುದನ್ನೇ ಅವಲಂಬಿಸಿರುತ್ತದೆ. ಆದ್ದರಿಂದ ತಕ್ಷಣವೇ ಈ ವಿಷಯದ ಬಗ್ಗೆ ಕಾರ್ಯೋನ್ಮುಖರಾಗಿ ನವೀಕೃತ ಅಂತರ್ಜಾಲವನ್ನು ದಿನಾಂಕ 26.01.2022ರಂದು ಲೋಕಾರ್ಪಣೆಗೊಳಿಸಿದ್ದೇವೆ ಎಂದು ತಿಳಿಸಲು ಹರ್ಷಿಸುತ್ತೇನೆ.

**ದಿನಾಂಕ 06-11-2021ರಂದು ಶ್ರೀ ಶಂಕರ ಭಗವತ್ಪಾದರ ಪ್ರತಿಮೆಯನ್ನು ಕೇದಾರನಾಥದಲ್ಲೂ ಹಾಗೂ ತಾ॥ 5-2-2022 ರಂದು ಹೈದರಾಬಾದಿನಲ್ಲೂ ಶ್ರೀ ರಾಮಾನುಜಾಚಾರ್ಯರ ಪ್ರತಿಮೆಯನ್ನು, ಸನಾತನ ಧರ್ಮದ ಆಚಾರ್ಯರ ರಾಷ್ಟ್ರೀಯ ಸ್ಮಾರಕವನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ರಾಷ್ಟ್ರಕ್ಕೆ ಸಮರ್ಪಣೆ ಮಾಡಿದ ಈ ಸಂದರ್ಭದಲ್ಲಿ ಮಹಾಸಭೆ ಮತ್ತು ಸಮಸ್ತ ಸನಾತನ ಧರ್ಮಿಗಳ ಪರವಾಗಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಹಾರ್ದಿಕವಾಗಿ ಅಭಿನಂದಿಸುತ್ತದೆ.**

ಇತ್ತೀಚೆಗೆ ಪೇಜಾವರದ ಜಗದ್ವಂದ್ಯ ಶ್ರೀ ಶ್ರೀ ವಿಶ್ವೇಶತೀರ್ಥರಿಗೆ ಮರಣೋತ್ತರ ಪದ್ಮವಿಭೂಷಣ ಪ್ರಶಸ್ತಿ ಪ್ರದಾನಗೊಂಡಿದ್ದು ಸಮಾಜಕ್ಕೆ ಹೆಮ್ಮೆಯ ಸಂಗತಿ. ಈ ಸಂದರ್ಭದಲ್ಲಿ ಹರಿಪದತಲದಲ್ಲಿರುವ ಆ ದಿವ್ಯ ಚೇತನವನ್ನು ಸ್ಮರಿಸಿ, ನಮಿಸೋಣ.

ನಮ್ಮ ಸಮಾಜದ ವಿಪ್ರವರೇಣ್ಯರಾದ ಪ್ರಸಿದ್ಧ ಗಮಕ ಕಲಾವಿದರಾದ ಶ್ರೀ ಹೆಚ್.ಆರ್. ಕೇಶವಮೂರ್ತಿ ಹಾಗೂ ಶ್ರೇಷ್ಠ ಕೃಷಿ ವಿಜ್ಞಾನಿ, ಕನ್ನಡಿಗ ಡಾ. ಸುಬ್ಬಣ್ಣ ಅಯ್ಯಪ್ಪನ್ ಅವರಿಗೆ ಸಂದ ಪದ್ಮಶ್ರೀ ಗೌರವ ನಿಜಕ್ಕೂ ಸಂತಸ ತಂದಿದೆ. ಅವರಿಬ್ಬರಿಗೆ ಮಹಾಸಭಾ ವತಿಯಿಂದಲೂ ಹಾಗೂ ವೈಯಕ್ತಿಕವಾಗಿಯೂ ನನ್ನ ಹಾರ್ದಿಕ ಅಭಿನಂದನೆಗಳು.

ದಿನಾಂಕ 26.01.2022ರಂದು ಗಾಯತ್ರಿ ಭವನದಲ್ಲಿ ನಡೆದ ಮೊದಲ ಕಾರ್ಯಕಾರಿಣಿ ಸಭೆಯಲ್ಲಿ ಮಹಾಸಭೆಯ ನೂತನ ಪದಾಧಿಕಾರಿಗಳ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರುಗಳ ಹೆಸರನ್ನು ಪ್ರಕಟಿಸುವ ಮೂಲಕ ಮಹಾಸಭೆಯನ್ನು ಬಲಗೊಳಿಸುವ ಮತ್ತು ಹೊಸ ರೂಪ ಕೊಡುವ ಕಾರ್ಯಯೋಜನೆಗೆ ಚಾಲನೆ ನೀಡಲಾಯಿತು. ಈ ಸಭೆಯಲ್ಲಿ ಸಂಘಟನೆ ಬಲಿಷ್ಠಗೊಳಿಸುವ ಕುರಿತು ಚರ್ಚಿಸಿ ಹಲವು ಸಕಾರಾತ್ಮಕ ನಿರ್ಣಯಗಳನ್ನು ಸ್ವೀಕರಿಸಲಾಗಿದೆ. ಇದರಲ್ಲಿ ಪ್ರಮುಖವಾಗಿ ಮಹಾಸಭೆಯ ಬೈಲಾ ತಿದ್ದುಪಡಿಯ ಬಗ್ಗೆ ಚರ್ಚಿಸಿ, ವಿಶೇಷ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಗಿದೆ.

ಮತ್ತೊಂದು ಪ್ರಮುಖ ವಿಷಯವೆಂದರೆ ಪ್ರಾಚೀನ ಭಾಷೆ ಎಂಬ ಗೌರವಕ್ಕೆ ಪಾತ್ರವಾಗಿರುವ ಸಂಸ್ಕೃತ ಭಾಷೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಇಟ್ಟಿರುವ ದಿಟ್ಟ ಹೆಜ್ಜೆಯನ್ನು ಮಹಾಸಭಾ ಅಭಿನಂದಿಸಿದೆ ಹಾಗೂ ಕರ್ನಾಟಕ ಸರ್ಕಾರ ಸಂಸ್ಕೃತ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ಘೋಷಿಸಿರುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ ಭೂಮಿ ಮಂಜೂರಾತಿ ಪ್ರಕ್ರಿಯೆಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಬೇಕೆಂದು ಮಹಾಸಭೆ ಸರ್ಕಾರಕ್ಕೆ ವಿನಂತಿಸಿದೆ.

ಇದೇ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾಗಿರುವ ಕಾರ್ಯಕಾರಿ ಸಮಿತಿಯ ಸದಸ್ಯರು ಅತ್ಯಂತ ಉತ್ಸಾಹದಿಂದ ವಿಪ್ರ ಶ್ರೇಯೋಭಿವೃದ್ಧಿಗಾಗಿ ರೂ.25 ಲಕ್ಷಕ್ಕೂ ಹೆಚ್ಚು ದೇಣಿಗೆಯನ್ನು ನೀಡುವ ಘೋಷಣೆ ಮಾಡಿರುವುದು ಸಂತೋಷದ ಸಂಗತಿ. ಹೀಗೆಯೇ ಅನೇಕ ಸಂಘ-ಸಂಸ್ಥೆಗಳು, ಸದಸ್ಯರು ನೆರವು ನೀಡುವ ಆಶ್ವಾಸನೆಯನ್ನು ನೀಡಿರುವುದು ಸ್ವಾಗತಾರ್ಹ.

ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ವಿಪ್ರನುಡಿಯ ಪತ್ರಿಕೆಯು ನೂತನ ವಿನ್ಯಾಸದೊಂದಿಗೆ ಹೊರ ಬಂದಿರುವುದನ್ನು ತಾವೆಲ್ಲರೂ ಸ್ವಾಗತಿಸುತ್ತೀರೆಂದು ನಂಬಿದ್ದೇನೆ. ಇದಕ್ಕಾಗಿ ನೂತನ ಸಂಪಾದಕ ಮಂಡಳಿಯನ್ನು ಅಭಿನಂದಿಸುತ್ತಾ, ಮುಂಬರುವ ದಿನಗಳಲ್ಲಿ ಪತ್ರಿಕೆಯು ಮಹಾಸಭೆಯ ಆಶಯ-ಅಭಿವೃದ್ಧಿಗೆ ಕನ್ನಡಿಯಾಗಿ ಹೆಚ್ಚು ಮೌಲ್ಯಯುತವಾಗಿ ಬರಲೆಂದು ಹಾರೈಸುತ್ತೇನೆ.

ಬಂಧುಗಳೇ, ಮಹಾಸಭಾದ ಕಾರ್ಯಕ್ರಮಗಳನ್ನು ತಮ್ಮದೇ ಕಾರ್ಯಕ್ರಮವೆಂದು ಭಾವಿಸಿ, ಪ್ರತಿಯೊಬ್ಬರೂ ಪಾಲ್ಗೊಂಡರೆ ಮಾತ್ರ ಸಮಾಜದ ಏಳಿಗೆ ನಿಶ್ಚಿತ. ನಿಮ್ಮಿಂದ, ನಿಮ್ಮ ನೆರವಿನಿಂದ, ನಿಮ್ಮ ಸಹಭಾಗಿತ್ವದಿಂದ, ಸಂಘಟನೆಯ ಅಭಿವೃದ್ಧಿ ಸಾಧ್ಯವಾಗುವುದರಿಂದ ಪ್ರತಿಯೊಬ್ಬರೂ ಈ ಮಹತ್ಕಾರ್ಯದಲ್ಲಿ ಮಹಾಸಭಾದೊಂದಿಗೆ ಕೈಜೋಡಿಸಬೇಕೆಂದು ನಿಮ್ಮಲ್ಲಿ ವಿನಂತಿಸುತ್ತೇನೆ.

**ಲೋಕಾಃ ಸಮಸ್ತಾ ಸುಖಿನೋಭವಂತು** ॥
**ಸಮಸ್ತ ಸನ್ಮಂಗಳಾನಿ ಭವಂತು** ॥

-ಅಶೋಕ ಹಾರನಹಳ್ಳಿ

## ಸಂಪಾದಕೀಯ

ಆತ್ಮೀಯ ವಿಪ್ರಬಂಧುಗಳೇ,

ನಮಸ್ಕಾರ. ಕಳೆದೆರಡು ವರ್ಷಗಳಿಂದ ಕೋವಿಡ್ ಪಿಡುಗು ಜಗತ್ತನ್ನೇ ವ್ಯಾಪಿಸಿ, ಜನರು ತತ್ತರಿಸಿ ಹೋಗಿದ್ದಾರೆ. ನಮ್ಮ ದೇಶ. ರಾಜ್ಯ ಸರ್ಕಾರಗಳು, ಸರ್ಕಾರೇತರ ಸಂಸ್ಥೆಗಳು ಕೋವಿಡ್ ಸಂತ್ರಸ್ತರಿಗೆ ನಿರಂತರವಾಗಿ ಸಹಾಯ ಮಾಡಿ ಆರೋಗ್ಯವನ್ನು ನಿಯಂತ್ರಣದಲ್ಲಿಡಲು ಶ್ರಮಿಸುತ್ತಿವೆ. ನಮ್ಮ ದೇಶವು ವಿಶ್ವದಲ್ಲೇ ಅತಿ ಹೆಚ್ಚು ನಾಗರಿಕರಿಗೆ ಲಸಿಕೆ ನೀಡಿರುವುದು, ನಮ್ಮ ರಾಜ್ಯವೂ ಮುಂದಿರುವುದು ಸಂತಸದ ಸಂಗತಿ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು (ರಿ.) ಕಳೆದೆರಡು ವರ್ಷಗಳಲ್ಲಿ, ಕೋವಿಡ್ ಹಾಗೂ ಇನ್ನಿತರ ಕಾರಣಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಲಿಲ್ಲ. ಈಗ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಖ್ಯಾತ ನ್ಯಾಯವಾದಿಗಳು, ಸಮಾಜ ಸೇವಕರು, ಶಿಕ್ಷಣ ಸಂಸ್ಥೆಗಳ ಗೌರವಾಧ್ಯಕ್ಷರಾದ ಸನ್ಮಾನ್ಯ ಅಶೋಕ ಹಾರನಹಳ್ಳಿ ಅವರು ಆಯ್ಕೆ ಆಗಿದ್ದಾರೆ. ಹಲವಾರು ಯೋಜನೆಗಳನ್ನು ಹಮ್ಮಿಕೊಂಡು ಮಹಾಸಭೆಯನ್ನು ಮುನ್ನಡೆಸಲು ಹೊಸ ಕಾರ್ಯಕಾರಿ ಸಮಿತಿ ರಚಿಸಿದ್ದಾರೆ. **ಕಳೆದ ತಿಂಗಳಲ್ಲಿ ಮಹಾಸಭೆಯ ನವೀಕೃತ ಜಾಲತಾಣ ಲೋಕಾರ್ಪಣೆ, ಉಪಸಮಿತಿಗಳ ರಚನೆಯಾಗಿದೆ. ಹೊಸ ವಿನ್ಯಾಸದೊಂದಿಗೆ 'ವಿಪ್ರನುಡಿ' ಮಾಸಿಕ ಸಂಚಿಕೆ ಪ್ರಕಟವಾಗುತ್ತಿದೆ.**

ಕರ್ನಾಟಕದ ಎಲ್ಲ ಬ್ರಾಹ್ಮಣರ ಮುಖವಾಣಿಯಾದ, ಅವರ ಆಶೋತ್ತರಗಳನ್ನು ಪ್ರತಿಬಿಂಬಿಸುವ ವಿಪ್ರನುಡಿ ತಮ್ಮ ಕೈಸೇರಿದೆ. ಈ ಸಂಚಿಕೆಯಲ್ಲಿ ಸನ್ಮಾನ್ಯ ಅಧ್ಯಕ್ಷರ ಸಂದರ್ಶನವಿದೆ. ಅವರು ಚುನಾವಣೆಯ ಹಿನ್ನೆಲೆ, ವೈಶಿಷ್ಟ್ಯ, ತಾವು ಎದುರಿಸುವ ಸವಾಲುಗಳು, ಸಂಪನ್ಮೂಲ ಕ್ರೋಢೀಕರಣ, ಸಂಘಟನೆಯ ಬಲ, ಅದಕ್ಕೆ ಕಾಯಕಲ್ಪ, ಸ್ವಾವಲಂಬನೆ, ನಮ್ಮ ಜನಾಂಗದ ಎಲ್ಲ ವರ್ಗದವರ ಅಭಿವೃದ್ಧಿ, ಸಂಸ್ಕಾರಕ್ಕೆ ಮಾರ್ಗದರ್ಶನ, ಬೈಲಾ–ತಿದ್ದುಪಡಿ, ವಿಪ್ರ ಜಾಗೃತಿ, ಹಲವು ವಿಷಯಗಳಲ್ಲಿ ವಿಪ್ರನುಡಿಯ ಪಾತ್ರ ಮುಂತಾದುದರ ಬಗ್ಗೆ ಮುಕ್ತವಾಗಿ ಚರ್ಚಿಸಿದ್ದಾರೆ. ಇದರಲ್ಲಿ ಅವರ ಪ್ರಗತಿಪರ, ದೂರಗಾಮಿ ಚಿಂತನೆ, ಸಾಂಘಿಕ ನಿಲುವುಗಳನ್ನು ಕಾಣಬಹುದು. ಮಹಾಭಾರತದಲ್ಲಿ ವಿದುರನು ಧೃತರಾಷ್ಟ್ರನಿಗೆ ಪರಸ್ಪರ ಸಹಾಯ ಮತ್ತು ಪರಸ್ಪರ ಅವಲಂಬನೆಯಿಂದ ಸರೋವರದಲ್ಲಿರುವ ಕನ್ನೈದಿಲೆಗಳಂತೆ ಸಂಬಂಧಿಕರು ಅಭಿವೃದ್ಧಿ ಹೊಂದುತ್ತಾರೆ ಎಂದು ಹೇಳುವ ಶ್ಲೋಕ ನೆನಪಾಗುತ್ತದೆ. **ಅನ್ಯೋನ್ಯಸಮುಪಷ್ಟಂಭಾತ್ ಅನ್ಯೋನ್ಯೋಪಾಶ್ರಯೇಣ ಚ । ಜ್ಞಾತಯಃ ಸಂಪ್ರವರ್ಧಂತೇ ಸರಸೀವೋತ್ಪಲಾನ್ಯುತ॥).**

ಶಿವಮೊಗ್ಗ ಬ್ರಾಹ್ಮಣ ಸಂಘವು ಒಂದು ಶತಮಾನದಿಂದ ಕಾರ್ಯಪ್ರವೃತ್ತವಾಗಿದ್ದು, ಶತಮಾನೋತ್ಸವವನ್ನು ಆಚರಿಸಿಕೊಂಡ ಬಗ್ಗೆ ನಮ್ಮೆಲ್ಲರಿಗೂ ಹೆಮ್ಮೆ ಇದೆ. ಅ ಸಂಬಂಧೀ ವರದಿ ಪ್ರಕಟಿಸಿದ್ದೇವೆ. ಸನ್ಮಾನ್ಯ ಅಧ್ಯಕ್ಷರ ನುಡಿ, ಕೋರಿಕೆ, ಈ ತಿಂಗಳ ವಿಶೇಷ ಹಬ್ಬವಾದ ಸಂಕ್ರಾಂತಿ–ರಥಸಪ್ತಮಿ, ಚುನಾವಣೆ, ಕಾರ್ಯಕಾರಿ ಸಮಿತಿ ವರದಿಗಳು, ಅಧಿಕಾರ ಸ್ವೀಕಾರ, ಪ್ರಚಲಿತ ವಿದ್ಯಮಾನ, ಬ್ರಾಹ್ಮಣರ ಸ್ಥಿತಿಗತಿ ವಿವರಿಸುವ ವಿಶ್ಲೇಷಣಾತ್ಮಕ ಬ್ರಾಹ್ಮಣ್ಯವೆಂಬ ಅಗ್ರಲೇಖನ, ನೂತನ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಸೂಚನೆಗಳು, ತಿಂಗಳ ಭವಿಷ್ಯವನ್ನು ಒಳಗೊಂಡಿದೆ. ಕೇಂದ್ರ ಸರ್ಕಾರವು ನೀಡುವ ನಾಲ್ಕನೇ ಹೆಚ್ಚುವರಿ ನಾಗರಿಕ ಪ್ರಶಸ್ತಿಯಾದ 'ಪದ್ಮಶ್ರೀ' ಗೆ ಭಾಜನರಾದ ಕರ್ನಾಟಕದ ವಿಪ್ರ ಮಹನೀಯರ ಪರಿಚಯವಿದೆ. ಮಹಾಸಭೆಯ ಪರವಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು. ಒಂದು ಶತಮಾನದಷ್ಟು ಹಳೆಯದಾದ ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾಗಿ ಆಯ್ಕೆಯಾದ ವಿಪ್ರಗಣ್ಯ ನಾಡೋಜ ಡಾ.ಮಹೇಶ್ ಜೋಷಿಯವರಿಗೆ ಅಭಿನಂದನೆಗಳು. ಉತ್ತಮ ಜೀವನಕ್ಕೆ ದಾರಿದೀಪವಾದ, ನಮ್ಮ ಪ್ರಾಚೀನ ಗ್ರಂಥಗಳಿಂದ ಆರಿಸಿದ ನಲ್ನುಡಿ ಇದೆ.

ವಿಪ್ರನುಡಿಯು ಹೊಸದಾಗಿ ರೂಪುಗೊಳ್ಳಲು ಮಾರ್ಗದರ್ಶನ ನೀಡಿದ ಮಾನ್ಯ ಅಧ್ಯಕ್ಷರಿಗೂ, ಸಂಪಾದಕ ಮಂಡಳಿ ಸದಸ್ಯರಿಗೂ, ಜಾಹೀರಾತು ನೀಡಿದ ವಿಪ್ರ ಉದ್ಯಮಿಗಳಿಗೂ, ಕೃತಜ್ಞತಾಪೂರ್ವಕ ವಂದನೆಗಳು. ಉತ್ಸಾಹದಿಂದ ಸಂಚಿಕೆಯನ್ನು ಅಂದವಾಗಿ ಮುದ್ರಿಸಿದ ಪರಿಮಳ ಮುದ್ರಣಾಲಯದ ಮಾಲೀಕರಾದ ಶ್ರೀ ಕೆ.ಸಿ. ಪ್ರಭಾಕರ್ ಮತ್ತು ಅವರ ಸಿಬ್ಬಂದಿಗೆ ಅಭಿನಂದನೆಗಳು. ವಿಪ್ರನುಡಿಯು ಇನ್ನಷ್ಟು ಸಂಗ್ರಹಯೋಗ್ಯವಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಈ ಕಲಿಯುಗದಲ್ಲಿ ಶಕ್ತಿಯ ಸಂಘಟನೆಯಲ್ಲಿಯೇ ಅಲ್ಲವೇ? (**ಸಂಘೇ ಶಕ್ತಿಃ ಕಲೌಯುಗೇ।**) ಎಲ್ಲರೂ ಒಟ್ಟುಗೂಡಿ ಕೆಲಸ ಮಾಡೋಣ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,

ಪ್ರೊ.ಎಂ.ಕೆ. ಶ್ರೀಧರ್

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ –ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜೋತಿಷ್ಯ ಇಂತಹ ವಾಣಿಜ್ಯಕ್ಕೆ ಸಂಬಂಧಿಸಿದ್ದು) ಮಹಾಸಭೆಯು ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

# ಶ್ರೀ ಶ್ರೀಗಳಿಗೆ "ಪದ್ಮ ವಿಭೂಷಣ"



**ಉಡುಪಿ ಶ್ರೀ ಪೇಜಾವರ ಮಠದ ಪೀಠಾಧಿಪತಿಗಳಾಗಿದ್ದ "ರಾಷ್ಟ್ರಸಂತ–ಸಂತರ ಸಂತ" ಎಂದು ಕರೆಯಲ್ಪಡುವ ಪರಮಪೂಜ್ಯ ವಿಶ್ವೇಶ್ವತೀರ್ಥ ಸ್ವಾಮೀಜಿಗಳಿಗೆ ಮರಣೋತ್ತರವಾಗಿ ನೀಡಲಾಗಿರುವ, ದೇಶದ ಅತ್ಯುನ್ನತ ಗೌರವಗಳಲ್ಲೊಂದಾದ "ಪದ್ಮ ವಿಭೂಷಣ" ಪ್ರಶಸ್ತಿಯನ್ನು ಭಾರತ ದೇಶದ ರಾಷ್ಟ್ರಪತಿಗಳಾದ ಶ್ರೀ ರಾಮನಾಥ್ ಕೋವಿಂದ್ ರವರು 2021 ನವೆಂಬರ್ 8 ರಂದು ರಾಷ್ಟ್ರಪತಿ ಭವನದಲ್ಲಿ ಪ್ರಧಾನ ಮಾಡಿದರು. ಪೇಜಾವರ ಮಠದ ಪರಮಪೂಜ್ಯ ಶ್ರೀ ಶ್ರೀ ವಿಶ್ವ ಪ್ರಸನ್ನತೀರ್ಥ ಶ್ರೀಪಾದರು ಅಂದು ನಡೆಯುವ ಸಮಾರಂಭದಲ್ಲಿ ಉಪಸ್ಥಿತರಿದ್ದು ಈ ಅತ್ಯುನ್ನತ ಪ್ರಶಸ್ತಿಯನ್ನು ಸ್ವೀಕರಿಸಿದರು.** ಈ ಪ್ರಶಸ್ತಿಯು ಶ್ರೀ ಶ್ರೀಗಳಿಗೆ ಸಂದಿರುವುದು ಇಡೀ ರಾಷ್ಟ್ರಕ್ಕೆ, ಅಪಾರ ಶಿಷ್ಯಕೋಟಿಗೆ, ವಿಶೇಷವಾಗಿ ವಿಪ್ರ ಬಾಂಧವರೆಲ್ಲರಿಗೂ ಅತ್ಯಂತ ಹರ್ಷದಾಯಕವಾಗಿದ್ದು ಸರ್ವರೂ ಹೆಮ್ಮೆ ಪಡುವ ವಿಷಯವಾಗಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಪದಾಧಿಕಾರಿಗಳು, ಸಮಸ್ತ ಸದಸ್ಯರೆಲ್ಲರೂ ಭಕ್ತಿಪೂರ್ವಕ ಶಿರಸಾಷ್ಟಾಂಗ ನಮಸ್ಕಾರಗಳನ್ನು **ಪದ್ಮವಿಭೂಷಣ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಚರಣಾರವಿಂದಗಳಲ್ಲಿ ಸಮರ್ಪಿಸುತ್ತಿದ್ದೇವೆ.**

ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರು 2019ರ ಡಿಸೆಂಬರ್ 29ರಂದು ಬೃಂದಾವನಸ್ಥರಾಗಿದ್ದು, ಉಡುಪಿಯ ಅಷ್ಟಮಠಗಳಲ್ಲದೇ ನಾಡಿನಾದ್ಯಂತ ಮಠ–ಮಾನ್ಯಗಳ ಪಾಲಿಗೆ ಅತ್ಯಂತ ಹಿರಿಯರಾಗಿದ್ದರು. ಯಾವುದೇ ಪ್ರತಿ ಫಲಾಪೇಕ್ಷೆಯಿಲ್ಲದೇ ಸಮಾಜ ಹಾಗೂ ಧರ್ಮದ ಸೇವೆಯಲ್ಲಿ ಸರ್ವದಾ ನಿರತರಾಗಿದ್ದು, ಸರ್ವ ಧರ್ಮೀಯರಿಗೂ ಅತ್ಯಂತ ಪ್ರೀತಿಪಾತ್ರರಾಗಿದ್ದರು. ಅಯೋಧ್ಯೆ ಹೋರಾಟದಲ್ಲಿ ಸಕ್ರಿಯವಾಗಿ ಗುರುತಿಸಿಕೊಂಡು ಮರ್ಯಾದಾ ಪುರುಷೋತ್ತಮ ಶ್ರೀ ರಾಮಚಂದ್ರಪ್ರಭುಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಅಸೇತು ಹಿಮಾಚಲ ದಾದ್ಯಂತ ರಾಷ್ಟ್ರವ್ಯಾಪಿ ಅಸಂಖ್ಯಾತ ಭಕ್ತ ಸಮೂಹವನ್ನು ಹೊಂದಿದ್ದು ಶಿಷ್ಯರನ್ನು ಅನುಗ್ರಹಿಸುತ್ತಿದ್ದರು. ಅನೇಕ ಸಮಾಜಮುಖೀ ಕಲ್ಯಾಣ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಯಾಗಿದ್ದಲ್ಲದೇ ಅವರ ಕ್ರಾಂತಿಕಾರಿ ಹೆಜ್ಜೆಗಳು ಎಲ್ಲರಿಂದಲೂ ಮೆಚ್ಚುಗೆಯನ್ನು ಪಡೆದಿದ್ದುದು ಸಾಕ್ಷೀಭೂತವಾಗಿದೆ. ಮರಣೋತ್ತರವಾಗಿ ನೀಡಲಾಗುತ್ತಿರುವ **"ಪದ್ಮ ವಿಭೂಷಣ" ಪ್ರಶಸ್ತಿಗೆ ಶ್ರೀ ಶ್ರೀಗಳ ಹೆಸರನ್ನು ಸೂಚಿಸಿ ಶಿಫಾರಸ್ಸು ಮಾಡಿದ ರಾಜ್ಯ ಸರ್ಕಾರಕ್ಕೂ ಹಾಗೂ ಅನುಮೋದಿಸಿದ ಕೇಂದ್ರ ಸರ್ಕಾರಕ್ಕೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಭಿನಂದನೆಗಳೊಂದಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು.**



# ಶ್ರದ್ಧಾಂಜಲಿ

## ದಿ. ಡಾ|| ಕೆ.ಎಸ್. ನಾರಾಯಣಾಚಾರ್ಯ

**ಕನ್ನಡ ಸಾರಸ್ವತ ಲೋಕದ ಮೇರು ವಿದ್ವಾಂಸರಾದ ಡಾ|| ಕೆ.ಎಸ್. ನಾರಾಯಣಾಚಾರ್ಯರವರು ಇತ್ತೀಚೆಗೆ ಇಹಲೋಕದ ಪಯಣವನ್ನು ಮುಗಿಸಿ, ನಮ್ಮನ್ನಗಲಿ ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ.** ರಾಷ್ಟ್ರೀಯ ಚಿಂತಕರು, ಶ್ರೇಷ್ಠ ದಾರ್ಶನಿಕರು, ಭಾರತೀಯ ಸಂಸ್ಕೃತಿಯ ಪ್ರವಚನಕಾರರು, ರಾಷ್ಟ್ರೀಯತೆಯ ಪ್ರಖರ ಪ್ರತಿಪಾದಕರೂ ಆದ ಶ್ರೀಯುತರು 75ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆಗಳಲ್ಲಿ ಅಂಕಣಕಾರರಾಗಿ, ಲೇಖಕರಾಗಿ ಉತ್ಕೃಷ್ಟ ಬರಹಗಳು ಶ್ರೀಯುತರ ಲೇಖನಿಯಿಂದ ಮೂಡಿಬಂದು ಪ್ರಕಟಿತಗೊಂಡಿವೆ.

ಟಿವಿ. ಚಾನೆಲ್, ಇತರೇ ಮಾಧ್ಯಮಗಳಲ್ಲಿ ಚರ್ಚೆ–ಸಂವಾದಗಳಲ್ಲಿ ಭಾಗವಹಿಸಿ ಅಧಿಕಾರಯುತವಾಗಿ ತಮ್ಮ ವಾದ–ಅನಿಸಿಕೆಗಳನ್ನು ನಿರ್ಭೀತರಾಗಿ ಮಂಡಿಸುತ್ತಿದ್ದರು. ನಮ್ಮ ನಾಡು–ನುಡಿ–ಸಂಸ್ಕೃತಿ, ಆಚಾರ–ವಿಚಾರ–ಸಂಪ್ರದಾಯಗಳ ಬಗ್ಗೆ ವಿಚಾರಪೂರ್ಣ ವಿಷಯಗಳನ್ನು ಪ್ರತಿಪಾದಿಸಿ ಜನಮನ್ನಣೆಯನ್ನು ಪಡೆದಿದ್ದರು. ಬಹುಭಾಷಾ ವಿದ್ವಾಂಸರಾಗಿದ್ದು, ವಿಶೇಷವಾಗಿ ಕನ್ನಡ–ಸಂಸ್ಕೃತ–ತಮಿಳು–ಇಂಗ್ಲಿಷ್ ಭಾಷೆಗಳಲ್ಲಿ ಪ್ರೌಢಿಮೆಗಳಿಸಿ ಉತ್ತಮ ವಾಗ್ಮಿಗಳಾಗಿದ್ದರು. ಸನಾತನ ಹಿಂದೂ ಧರ್ಮದ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದರು. ಸದಾ ಅಧ್ಯಯನ–ಅಧ್ಯಾಪನಗಳಲ್ಲಿ ನಿರತರಾಗಿದ್ದರು. ಮೂಲ ವಾಲ್ಮೀಕಿ ರಾಮಾಯಣದ ಸತ್ಯಾಸತ್ಯತೆಯನ್ನು ತಮ್ಮ ಪ್ರವಚನಗಳ ಮೂಲಕ ವಿಶೇಷವಾಗಿ ಅರ್ಥೈಸುತ್ತಿದ್ದರು.

ಆರ್ಷ ಸಂಸ್ಕೃತಿಯ ಶ್ರೇಷ್ಠ ವಿದ್ವಾಂಸರೂ, ಭಾರತೀಯ ಆಚಾರ–ವಿಚಾರಗಳ ಪ್ರತಿಪಾದಕರೂ, ರಾಷ್ಟ್ರೀಯ ಸಂಶೋಧನಾ ದಿಗ್ಗಜರೂ ಆಗಿದ್ದ ಡಾ|| ಕೆ.ಎಸ್. ನಾರಾಯಣಾಚಾರ್ಯ ಅವರ ನಿಧನದಿಂದಾಗಿ ಸನಾತನ ವ್ಯಾಸ ಪರಂಪರೆಯ ಮಹಾನ್ ಕೊಂಡಿಯೊಂದು ಕಳಚಿದಂತಾಗಿದೆ. ಭಾರತೀಯ ಸನಾತನ ಹಾಗೂ ಇಂಗ್ಲಿಷ್ ಸಾಹಿತ್ಯ ಎರಡರಲ್ಲೂ ಅಪಾರ ಪಾಂಡಿತ್ಯ ಪಡೆದಿದ್ದ, ಋಷಿಸದೃಶರಾಗಿದ್ದ ಶ್ರೀ ಆಚಾರ್ಯರ ದಿವ್ಯಾತ್ಮಕ್ಕೆ ಗೌರವಪೂರ್ವಕ ಪ್ರಣಾಮಗಳು.

ಅನೇಕ ಬಿರುದು–ಬಾವಲಿ–ಸನ್ಮಾನಗಳಿಂದ ಪುರಸ್ಕೃತಗೊಂಡಿದ್ದ ಶ್ರೀಯುತರ ಮರಣವು ವಿಪ್ರ ಸಮುದಾಯಕ್ಕೆ, ನಾಡಿಗೆ, ರಾಷ್ಟ್ರಕ್ಕೆ, ಸಾಹಿತ್ಯ ವಲಯಕ್ಕೆ, ಆಧ್ಯಾತ್ಮಿಕ ಲೋಕಕ್ಕೆ ತುಂಬಲಾರದ ನಷ್ಟವಾಗಿದೆ. **ಶ್ರೀಯುತರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಪದಾಧಿಕಾರಿಗಳ, ಸಮಸ್ತ ಸದಸ್ಯರ ಹಾಗೂ ವಿಪ್ರಬಾಂಧವರ ಪರವಾಗಿ ಸಂತಾಪವನ್ನು ಸೂಚಿಸಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.**

# ಸಂಕ್ರಾಂತಿ ಮತ್ತು ರಥಸಪ್ತಮಿ

–ಪ್ರೊ : ಎಂ.ಕೆ. ಶ್ರೀಧರ್

**ಹಿಂದೂಗಳಿಗೆ, ಭಾರತೀಯರಿಗೆ ಸಂಕ್ರಾಂತಿ ಮತ್ತು ರಥಸಪ್ತಮಿ ಬಹಳ ಮುಖ್ಯವಾದ ಹಬ್ಬಗಳು**. ಎರಡೂ ಸಹ ಉತ್ತರಾಯಣದಲ್ಲಿ ಬರುತ್ತವೆ. ಸೂರ್ಯನು ತನ್ನ ದಕ್ಷಿಣಾಪಥದಿಂದ ಉತ್ತರಪಥಕ್ಕೆ ಪ್ರವೇಶಿಸುವ ಪ್ರಮುಖ ಸಂಧಿಕಾಲವಿದು. ಸೂರ್ಯನ ಆರಾಧನೆ ಈ ಹಬ್ಬದ ಪ್ರಮುಖ ಆಕರ್ಷಣೆ. ನಂತರ ಹಗಲು ಜಾಸ್ತಿಯಾಗಿ, ಚಳಿ ಕಡಿಮೆ ಆಗುತ್ತದೆ. ಸೂರ್ಯನ ಬಹುಮುಖ್ಯ ಉಪಯೋಗ ಎಲ್ಲರಿಗೂ ತಿಳಿದಿದ್ದೇ, ಋಗ್ವೇದದ ಪುರುಷ ಸೂಕ್ತದಲ್ಲಿ (.90) **'ಚಕ್ಷುಃ ಸೂರ್ಯೋ ಅಜಾಯತ**। ಅಂದರೆ ಕಣ್ಣುಗಳು ಸೂರ್ಯನಿಂದ ಜನಿಸಿದವು. **'ಸೂರ್ಯ ಆತ್ಮಾ ಜಗತಃ'** ಸೂರ್ಯನೇ ಜಗತ್ತಿನ ಆತ್ಮ ಎಂದು ಹೇಳಲಾಗಿದೆ. ಜ್ಯೋತಿಶ್ಯಾಸ್ತ್ರದ ಪ್ರಕಾರ ಸೂರ್ಯನನ್ನು ಆಧರಿಸಿ, ಜಾತಕ, ಕುಂಡಲಿ, ಮುಹೂರ್ತ ಮುಂತಾದವು ನಿಶ್ಚಯವಾಗುತ್ತದೆ.

ಸಂಕ್ರಾಂತಿ ಹಬ್ಬವನ್ನು ಮಕರ ಸಂಕ್ರಾಂತಿ ಎಂದು ಸಡಗರದಿಂದ ಆಚರಿಸುತ್ತಾರೆ. ರೈತಾಪಿ ಜನರಿಗೆ ಸುಗ್ಗಿಯ ಹಬ್ಬ. ಹೊಸದಾಗಿ ಫಸಲು ಬಂದ ಎಳ್ಳು, ಕಡಲೆ, ಕಬ್ಬು ಮುಂತಾದ್ದನ್ನು ಕೊಯ್ದು ಭಗವಂತನಿಗೆ ಅರ್ಪಿಸಿ, ಮಿಶ್ರಣ ಮಾಡಿ ಎಳ್ಳು–ಬೆಲ್ಲಗಳನ್ನು ನೆಂಟರಿಷ್ಟರೊಂದಿಗೆ ಹಂಚಿ ತಿನ್ನುವ ಆನಂದದ ಸಮಯ. ರೈತರು ಜಾನುವಾರುಗಳಿಗೆ ಕೃತಜ್ಞತೆಯ ಸಲ್ಲಿಸಿರುವ ಸಂದರ್ಭವಿದು. ಸೌರಮಾನದ ಸಂಕ್ರಮಣಗಳಲ್ಲಿ ಮೇಷ, ತುಲಾ, ಕರ್ಕಾಟಕ, ಮಕರಗಳಲ್ಲಿ ಕೊನೆಯದು, ಮುಖ್ಯವಾದದ್ದು. ಆದ್ದರಿಂದಲೇ ಭೀಷ್ಮ ಪಿತಾಮಹರು ಮಹಾಭಾರತ ಯುದ್ಧ ಮುಗಿದ ಮೇಲೆ ಶರಶಯ್ಯೆಯಲ್ಲಿದ್ದು, ಉತ್ತರಾಯಣದಲ್ಲಿ ದೇಹ ತ್ಯಜಿಸಿದರು. ನಮ್ಮ ದೇಶದ ಹಲವು ರಾಜ್ಯಗಳಲ್ಲಿ ಸಂಕ್ರಾಂತಿಯನ್ನು ವಿವಿಧ ಹೆಸರುಗಳಲ್ಲಿ ಆಚರಿಸುತ್ತಾರೆ. ಉದಾಹರಣೆಗೆ ತಮಿಳುನಾಡಿನಲ್ಲಿ ಪೊಂಗಲ್, ಪಂಜಾಬ್‌ನಲ್ಲಿ ಲೋ. ಚಳಿಗಾಲದಲ್ಲಿ ಎಳ್ಳಿನ ಸೇವನೆಯ ಲಾಭ ಕುರಿತು ಆಯುರ್ವೇದದಲ್ಲಿ ಮಾಹಿತಿ ಇದೆ. ಈ ದಿನದಂದು ಸ್ವರ್ಗದ ಬಾಗಿಲು ತೆರೆಯುತ್ತದೆ ಎಂದು ನಂಬಿಕೆ. ಜಗತ್ತಿಗೆ ಕಣ್ಣಾದ ದಿನದಂದು ಉತ್ತರಾಯಣದಲ್ಲಿ ಸೂರ್ಯನನ್ನು ಪೂಜೆ, ಜಪ–ತಪಗಳ ಮೂಲಕ ಅರ್ಚಿಸಿ ಕೃತಾರ್ಥರಾಗೋಣ.

**ಮಾಘ ಮಾಸದ ಶುಕ್ಲ ಪಕ್ಷದ ಸಪ್ತಮಿಯಂದು ರಥಸಪ್ತಮಿಯ ಆಚರಣೆ**. ಸೂರ್ಯನು ತನ್ನ ಏಳು ಕುದುರೆಗಳೊಂದಿಗೆ, ಅರುಣನನ್ನು ಸಾರಥಿಯನ್ನಾಗಿಸಿ ರಥದಲ್ಲಿ ವಿಶ್ವ ಪರ್ಯಟನೆ ಆರಂಭಿಸುತ್ತಾನೆ. ಆದ್ದರಿಂದಲೇ ಆದಿತ್ಯ ಹೃದಯದಲ್ಲಿ **'ಋತುಕರ್ತಾ ಪ್ರಭಾಕರಃ'** ಎಂದು ಹೊಗಳಲಾಗಿದೆ. ಮಾಘದ ಚಳಿಯನ್ನು ಹೊಡೆದೋಡಿಸಿ, ಚೈತ್ರದ ಆಗಮನಕ್ಕೆ ಸಂಚಾಲನೆ ದೊರೆಯುತ್ತದೆ. ನವಗ್ರಹಗಳಲ್ಲಿ ಪ್ರಮುಖವಾದ ಸೂರ್ಯನಿಗೆ ಅಶ್ವತ್ಥ ಅಥವ ಅರಳಿ ಸಮಿತ್ತು, ಬೆಲ್ಲ, ಗೋಧಿ, ಶಾಲ್ಯಾನ್ನ ಪ್ರಿಯವಾದವು. ಹಾಗೆಯೇ ಅರ್ಕ ಅಥವಾ ಎಕ್ಕದ ಎಲೆ. ಈ ಹಬ್ಬದಂದು ಅರ್ಕವನ್ನು ಇಟ್ಟುಕೊಂಡು ಸ್ನಾನ ಮಾಡುವ ಪದ್ದತಿ ಇದೆ. ಸೂರ್ಯ ಆರಾಧನೆಯಿಂದ ಬಿಸಿಲಿಗೆ ದೇಹ ಒಡ್ಡುವುದರಿಂದ, ಹಲವಾರು ಖಾಯಿಲೆಗಳು, ವಿಶೇಷವಾಗಿ ಕುಷ್ಠರೋಗ ನಿವಾರಣೆ ಆಗುತ್ತದೆ ಎಂಬ ನಂಬಿಕೆ ಇದೆ. 8ನೇ ಶತಮಾನದ ಸಂಸ್ಕೃತ ಕವಿ ಮಯೂರ ಸೂರ್ಯ ಶತಕ ಬರೆದು ತನ್ನ ಈ ರೋಗವನ್ನು ನಿವಾರಿಸಿಕೊಂಡನಂತೆ.

## ನೂತನ ಕಾರ್ಯಕಾರಿಣಿಯ ಮೊದಲ ಸಭೆಯ ನಿರ್ಣಯಗಳು :

ಕಳೆದ ಸಾಲಿನ ಮಹಾಸಭಾ ಕಾರ್ಯಕಾರಿಣಿಯು ಹಿಂದಿನ ಅಧ್ಯಕ್ಷರ ಹಾಗೂ ಪದಾಧಿಕಾರಿಗಳ ನೇತೃತ್ವದಲ್ಲಿ ರಾಜ್ಯದ ವಿಪ್ರ ಸಮುದಾಯಕ್ಕೆ ಅಪರಿಮಿತ ಸೇವೆ ಸಲ್ಲಿಸಿರುತ್ತಾರೆ. ಕರೋನ–19 ಸಾಂಕ್ರಾಮಿಕ ವ್ಯಾಧಿ ರಾಜ್ಯವ್ಯಾಪಿ ಹರಡಿದ್ದರೂ, ಆರ್ಥಿಕ ಪರಿಸ್ಥಿತಿ ಆಶಾದಾಯಕವಾಗಿಲ್ಲದಿದ್ದರೂ ಉತ್ತಮ ಸೇವೆ ಮಾಡಿದ ಹಿಂದಿನ ಸಮಿತಿಗೆ ಮತ್ತು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಅತ್ಯಂತ ವಿನಯದಿಂದ ಈ ಸಭೆಯು ಕೃತಜ್ಞತೆಯನ್ನು ಸಲ್ಲಿಸುತ್ತದೆ. **ಅಮೂಲ್ಯ ಸೇವೆಯನ್ನು ಈ ಮೂಲಕ ಮಹಾಸಭೆಯು ದಾಖಲಿಸುತ್ತದೆ.**

**ಅಭಿನಂದನಾ ನಿರ್ಣಯ :** ಪ್ರಾಚೀನ ಭಾಷೆ ಎಂಬ ಗೌರವಕ್ಕೆ ಪಾತ್ರವಾಗಿರುವ ಸಂಸ್ಕೃತ ಭಾಷೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಇಟ್ಟಿರುವ ದಿಟ್ಟ ಹೆಜ್ಜೆಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ಅಭಿನಂದಿಸುತ್ತದೆ.

ಸಂಸ್ಕೃತ ಭಾಷೆಯ ಅಧ್ಯಯನ ಇನ್ನಷ್ಟು ವ್ಯವಸ್ಥಿತಗೊಳಿಸುವ ನಿಟ್ಟಿನಲ್ಲಿ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಬಲಗೊಳಿಸುವ ದೃಷ್ಟಿಯಿಂದ ಇನ್ನಷ್ಟು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಮುಂದಾಗಿರುವುದು ಅಭಿನಂದನೀಯ ಮತ್ತು ಸ್ವಾಗತಾರ್ಹ ನಿರ್ಧಾರ ವಾಗಿದೆ.

ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಬಲಪಡಿಸುವ ಉದ್ದೇಶದಿಂದ ವಿವಿಗೆ 359 ಕೋಟಿ ರೂ. ನೆರವು ನೀಡುವ ಮತ್ತು ರಾಮನಗರ ಸಮೀಪ ನೂರು ಎಕರೆ ಭೂಮಿ ನೀಡುವ, ಮೂಲಭೂತ ಸೌಲಭ್ಯಗಳನ್ನು ಒದಗಿಸುವ ನಿರ್ಧಾರಕ್ಕೆ ಬದ್ಧವಾಗಿರುವ ಮೂಲಕ ರಾಜ್ಯ ಸರ್ಕಾರ ಈ ಪ್ರಾಚೀನ ಭಾಷೆಯ ಉನ್ನತ ಅಧ್ಯಯನಕ್ಕೆ ಉತ್ತೇಜನ ನೀಡಿದಂತಾಗಿದೆ. ಅಷ್ಟೇ ಅಲ್ಲ ಸಂಸ್ಕೃತ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯಕ್ಕೆ ಪ್ರೋತ್ಸಾಹ ನೀಡಿದಂತಾಗಿದೆ.

ರಾಜ್ಯ ಸರ್ಕಾರದ ಈ ನಿರ್ಧಾರದಿಂದ ಭಾಷೆಯ ಕುರಿತಾದ ಸಂಶೋಧನ ಚಟುವಟಿಕೆಗಳು ಬಲಗೊಳ್ಳಲಿದ್ದು ಅಧ್ಯಯನ ದೃಷ್ಟಿಯಿಂದಲೂ ಹೆಚ್ಚಿನ ಅನುಕೂಲವಾಗಲಿದೆ. ಇಂತಹ ಮಹತ್ವದ ಮತ್ತು ಉಪಯುಕ್ತ ನಿರ್ಣಯ ಕೈಗೊಂಡ ರಾಜ್ಯ ಸರ್ಕಾರವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಭಿನಂದಿಸುತ್ತದೆ.

ಸರ್ಕಾರ ವಿಶ್ವವಿದ್ಯಾನಿಲಯದ ಚಟುವಟಿಕೆಗಳಿಗೆ ಘೋಷಿಸಿರುವ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಭೂಮಿ ಮಂಜೂರಾತಿ ಪ್ರಕ್ರಿಯೆಗಳನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸ ಬೇಕೆಂದೂ ಮಹಾಸಭಾ ಆಗ್ರಹಪಡಿಸುತ್ತದೆ.

–ಶ್ರೀಧರಮೂರ್ತಿ ಎಸ್., ಪ್ರಧಾನ ಕಾರ್ಯದರ್ಶಿ

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನವೀಕೃತ ಜಾಲತಾಣ ಲೋಕಾರ್ಪಣೆ

## ಸದಸ್ಯತ್ವ ನೋಂದಣಿಗೆ ಡಿಜಿಟಲ್ ಕಾಯಕಲ್ಪ



**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ದ ನವೀಕೃತ ನೂತನ ವೆಬ್‌ಸೈಟನ್ನು ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರು ಬುಧವಾರ ತಾರೀಖು 26.01.2022ರಂದು ಲೋಕಾರ್ಪಣೆ ಮಾಡಿದರು.**

ಮಹಾಸಭಾದ ಕೇಂದ್ರ ಕಛೇರಿ ಗಾಯತ್ರೀ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಶೋಕ ಹಾರನಹಳ್ಳಿ ಅವರು ಮಾತನಾಡಿ, ನೂತನ ವೆಬ್‌ಸೈಟ್ ಮಹಾಸಭಾದ ಸಮಸ್ತ ಚಟುವಟಿಕೆಗಳ ವಿವರಗಳನ್ನು ಒಳಗೊಂಡಿದ್ದು, ಆನ್‌ಲೈನ್ ಮೂಲಕ ಸದಸ್ಯತ್ವ ನೋಂದಣಿ ಪಡೆಯುವ ಅವಕಾಶ ಕಲ್ಪಿಸಲಾಗಿದೆ ಎಂದು ವಿವರಿಸಿದರು. ಇದುವರೆಗೆ ಮಹಾಸಭೆಯ ಸದಸ್ಯತ್ವ ಪಡೆಯಲಿಚ್ಛಿಸುವವರು ಕಚೇರಿಗೆ ಬಂದು ಅರ್ಜಿ ಪಡೆದು ತುಂಬಿ ಕೊಡಬೇಕಾಗಿದ್ದು, ಹೊಸ ವ್ಯವಸ್ಥೆಯಲ್ಲಿ ಆನ್‌ಲೈನ್‌ನಲ್ಲೇ ಅಗತ್ಯ ವಿವರಗಳನ್ನು ಸಲ್ಲಿಸಿ ಸದಸ್ಯತ್ವ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಇದರಿಂದಾಗಿ ಕರ್ನಾಟಕದ ನಾನಾ ಭಾಗದಲ್ಲಿರುವ ವಿಪ್ರ ಬಂಧುಗಳಷ್ಟೇ ಅಲ್ಲದೇ ದೇಶ ವಿದೇಶಗಳಲ್ಲಿರುವ ಸಮುದಾಯದ ಬಂಧುಗಳೂ ಮಹಾಸಭೆಯ ಚಟುವಟಿಕೆಗಳ ಬಗ್ಗೆ ಎಲ್ಲ ಮಾಹಿತಿ ಪಡೆಯಬಹುದಲ್ಲದೇ ಸದಸ್ಯತ್ವ ನೋಂದಣಿ ಪ್ರಕ್ರಿಯೆಯಲ್ಲಿಯೂ ಪಾಲ್ಗೊಳ್ಳಲು ಅವಕಾಶ ನೀಡಲಾಗಿದೆ ಎಂದರು. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಮುದಾಯದ ಅರ್ಚಕರು, ಬದುಕು ಸಾಗಿಸಲು ಅಡುಗೆ ಕೆಲಸ ನಂಬಿಕೊಂಡವರ ಅಭ್ಯುದಯಕ್ಕಾಗಿ ಹಲವು ಕಾರ್ಯಕ್ರಮಗಳನ್ನು ಮಹಾಸಭಾ ವತಿಯಿಂದ ಜಾರಿಗೊಳಿಸಲು ಉದ್ದೇಶಿಸಿದ್ದು, ಪ್ರತಿಭಾವಂತ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ ವಿದ್ಯಾನಿಧಿ ಯೋಜನೆ ಜಾರಿಗೊಳಿಸುವುದಾಗಿಯೂ ತಿಳಿಸಿದರು. ಸಮುದಾಯದ ವೈದ್ಯರು ಸೇರಿದಂತೆ ವಿವಿಧ ವೃತ್ತಿಪರರು, ಉದ್ಯಮಿಗಳ ಪ್ರತ್ಯೇಕ ಸಮಿತಿಗಳನ್ನು ರಚಿಸಿ ರಿಯಾಯಿತಿ ದರದಲ್ಲಿ ವೈದ್ಯಕೀಯ ಸೌಲಭ್ಯ, ಹೊಸ ಉದ್ದಿಮೆ ಸ್ಥಾಪಿಸಲು ಇಚ್ಛಿಸುವ ಸಮಾಜದ ಉತ್ಸಾಹಿ ಯುವ ಉದ್ದಿಮೆದಾರರಿಗೆ ಅಗತ್ಯ ಮಾರ್ಗದರ್ಶನ ನೀಡುವುದೂ ಸೇರಿದಂತೆ ವಿವಿಧ ಯೋಜನೆಗಳನ್ನು ಮುಂದಿನ ದಿನಗಳಲ್ಲಿ ಜಾರಿಗೊಳಿಸುವುದಾಗಿಯೂ ಶ್ರೀ ಅಶೋಕ ಹಾರನಹಳ್ಳಿ ಅವರು ತಿಳಿಸಿದರು. ಮಹಾಸಭೆಯ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ ಅನ್ನು ಬಲಪಡಿಸುವುದಾಗಿಯೂ ಸ್ಪಷ್ಟಪಡಿಸಿದರು. **ಮಹಾಸಭೆಯ ವಿವಿಧ ಚಟುವಟಿಕೆಗಳಿಗೆ ಆರ್ಥಿಕವಾಗಿ ನೆರವಾಗಲು ಸಮುದಾಯದ ಅನೇಕರು ಮುಂದೆ ಬಂದಿದ್ದು, ಈಗಾಗಲೇ 25 ಲಕ್ಷ ರೂ. ಗಳಿಗೂ ಅಧಿಕ ಮೊತ್ತದ ಆಶ್ವಾಸನೆ ದಾನಿಗಳಿಂದ ದೊರಕಿದೆ ಎಂದರು.** ಕಾರ್ಯಕ್ರಮದಲ್ಲಿ ಶ್ರೀ ವಿಶ್ವೇಶ್ವರ ಭಟ್ ಸಂಗಡಿಗರಿಂದ ವೇದಘೋಷ ನಡೆಯಿತು. ಹಿರಿಯ ಮುಖಂಡ ಹೆಚ್.ಎನ್. ಹಿರಿಯಣ್ಣ ಸ್ವಾಮಿ ಸ್ವಾಗತಿಸಿದರು.

ವೆಬ್‌ಸೈಟ್ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಡಿಜಿಟಲ್ ತಂಡದ ಕೃಷ್ಣಸ್ವಾಮಿ, ಅಮಿತ್, ಶ್ರೀಕಿರಣ್, ಕಾರ್ತಿಕ್ ಬಾಪಟ್, ರಘು, ಗುರು, ನಿಖಿಲ್ ಪ್ರವೀಣ್, ವೆಂಕಟೇಶ್, ಸಮುದ್ಯತಾ, ವೇಣು, ಪ್ರಸನ್ನ, ಕಿರಣ್ ನಾಡಿಗ್, ಹಿರಿಯಣ್ಣ ಮತ್ತು ಉಮೇಶ್ ಮೊದಲಾದವರಿಗೆ ಅಧ್ಯಕ್ಷರು ಅಭಿನಂದನೆ ಸಲ್ಲಿಸಿದರು.

## ಸಾಂಗೋಪಾಂಗವಾಗಿ ಸಂಪನ್ನವಾದ ಮಹಾಸಭೆಯ ಅಧ್ಯಕ್ಷರ ಚುನಾವಣೆ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ಇದರ 2022–2024ರ ಅವಧಿಗೆ ಮಹಾಸಭಾ ಅಧ್ಯಕ್ಷರ ಚುನಾವಣೆಯು ದಿನಾಂಕ 12–12–2021ರ ಭಾನುವಾರ ಮೈಸೂರು, ಹಾಸನ, ಶಿವಮೊಗ್ಗ, ಹುಬ್ಬಳ್ಳಿ, ರಾಯಚೂರು ಕೇಂದ್ರಗಳಲ್ಲಿ ಹಾಗೂ ದಿನಾಂಕ 19–12–2021ರ ಭಾನುವಾರ ಬೆಂಗಳೂರಿನ ಕೇಂದ್ರಗಳಲ್ಲಿ, ಹಾಗೂ ಮಹಾಸಭೆಯ 40ನೇ ವಾರ್ಷಿಕ ಸರ್ವಸದಸ್ಯರ ಸಭೆಯು ಶ್ರೀ ರಾಯ ರಾಯ ಕಲ್ಯಾಣ ಮಂಟಪದ ಆವರಣದಲ್ಲಿ ನಡೆದಿದ್ದು ಅದರಂತೆ ಚುನಾವಣೆ ಪ್ರಕ್ರಿಯೆಗಳು ಮುಗಿದಿದ್ದು, ಮುಖ್ಯ ಚುನಾವಣಾಧಿಕಾರಿಗಳಾದ ಶ್ರೀ ಹೆಚ್.ಕೆ. ಶ್ರೀನಿವಾಸ್‌ರವರು ಅಧಿಕೃತವಾಗಿ ಚುನಾವಣಾ ಫಲಿತಾಂಶವನ್ನು ಪ್ರಕಟಿಸಿದ್ದಾರೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾಗಿ ಶ್ರೀಯುತ ಅಶೋಕ ಹಾರನಹಳ್ಳಿಯವರು 455 ಮತಗಳಿಂದ ಚುನಾಯಿತರಾಗಿದ್ದಾರೆಂದು ಘೋಷಿಸಿದ್ದಾರೆ.** ಚುನಾವಣೆಯಲ್ಲಿ ಒಟ್ಟು 10,632 ಮತಗಳು ಚಲಾವಣೆಗೊಂಡಿದ್ದು, ಅದರಲ್ಲಿ ಶ್ರೀಯುತ ಅಶೋಕ ಹಾರನಹಳ್ಳಿಯವರು 4,424 ಮತಗಳನ್ನು, ಶ್ರೀ ಆರ್. ಲಕ್ಷ್ಮೀಕಾಂತ್ ರವರು 2,239 ಮತಗಳನ್ನು ಹಾಗೂ ಶ್ರೀ ಎಸ್. ರಘುನಾಥ್‌ರವರು 3,969 ಮತಗಳನ್ನು ಪಡೆದಿದ್ದಾರೆ. **ನೂತನ ಅಧ್ಯಕ್ಷರಾಗಿ ಚುನಾಯಿತಗೊಂಡ ಶ್ರೀ ಅಶೋಕ ಹಾರನಹಳ್ಳಿಯವರಿಗೆ ಮಹಾಸಭಾದ ಸಮಸ್ತ ಸದಸ್ಯರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.**

**ಮುಖ್ಯ ಚುನಾವಣಾಧಿಕಾರಿಗಳಾದ ಶ್ರೀ ಹೆಚ್.ಕೆ. ಶ್ರೀನಿವಾಸ್ ಹಾಗೂ ಅವರ ತಂಡಕ್ಕೆ, ಕಾನೂನು ಸುವ್ಯವಸ್ಥೆಗೆ ಸಹಕರಿಸಿದ ಪೊಲೀಸ್ ಇಲಾಖೆಗೆ, ಮಹಾಸಭಾ ಪದಾಧಿಕಾರಿಗಳಿಗೆ, ಮಹಾಸಭಾ ಸಿಬ್ಬಂದಿ ವರ್ಗದವರಿಗೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಅನಂತಾನಂತ ವಂದನೆಗಳು.**



## ಅಶೋಕ ಹಾರನಹಳ್ಳಿ

### – ನಡೆದು ಬಂದ ದಾರಿ

ಜನ್ಮತಃ ಹುಟ್ಟು ಹೋರಾಟಗಾರರ ಕುಟುಂಬದಲ್ಲಿ ಜನನ. ಗಾಂಧೀ ತತ್ವವಾದಿ, ಸ್ವಾತಂತ್ರ್ಯಯೋಧ, ನುರಿತ ರಾಜಕಾರಿಣಿ ಅಜ್ಜ ಶ್ರೀ ಸರ್ದಾರ ವೆಂಕಟರಾಮಯ್ಯ ಮತ್ತು ಶ್ರೀ ಹಾರನಹಳ್ಳಿ ರಾಮಸ್ವಾಮಿಯವರ ಸುಪುತ್ರರು. ಸತ್ಯ–ನಿತ್ಯ–ನೇರನುಡಿಯ ಪಾಠ ಹಾಗೂ ಅದರ ಯಶಸ್ವೀ ಪ್ರಯತ್ನ ಪಾರದರ್ಶಿಕಾ ಕುಟುಂಬ ವಲಯದಿಂದ.

ಮಹಾಸಭೆಯಲ್ಲಿ ಕೇಂದ್ರ ಸಮಿತಿ ಸದಸ್ಯರು, ಉಪಾಧ್ಯಕ್ಷರು, ಕಾನೂನು ಸಲಹೆಗಾರು, ವೃತ್ತಿಯಲ್ಲಿ ವಕೀಲರು, ಪ್ರಸ್ತುತ ಹಿರಿಯ ನ್ಯಾಯವಾದಿಗಳು.

ಕರ್ನಾಟಕ ರಾಜ್ಯ ಸರ್ಕಾರದ ಮಾಜಿ ಅಡ್ವೋಕೇಟ್ ಜನರಲ್.

ಹಾಸನದ ಮಲೆನಾಡು ಶಿಕ್ಷಣ ಸಂಸ್ಥೆಯ ಅಧ್ಯಕ್ಷರು. ಅರಸೀಕೆರೆ ಮಾಲೇಕಲ್ಲು ತಿರುಪತಿಯ ಶ್ರೀ ಚಂದ್ರಶೇಖಭಾರತಿ ವಿದ್ಯಾಂಸ್ಥೆಯ ಅಧ್ಯಕ್ಷ.

ಲೋಕ ಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಮತ್ತು ಪತ್ರಿಕಾರಂಗ ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಅನುಪಮ ಸೇವೆ.

ಹಲವು ಮಠ, ಮಂದಿರಗಳ ಸೇವಾಸಕ್ತರಾಗಿ ಪರಮಪೂಜ್ಯರ, ಯತಿವರ್ಯರ ಆಪ್ತ ವಲಯದಲ್ಲಿ ಕಾನೂನು ಸಲಹೆಗಾರರು.

ಪ್ರಾಚಾರ್ಯಗಾಗಿ, ಬೋಧಕರಾಗಿ, CBI ರಿಟೈನರ್ ಕೌನ್ಸಿಲರ್ ಆಗಿ, ಕೇಂದ್ರ ಸರ್ಕಾರದ ಹಿರಿಯ ವಕೀಲರಾಗಿ, ಕರ್ನಾಟಕ ಬಾರ್ ಕೌನ್ಸಿಲ್ ಲಾ ಅಕಾಡೆಮಿಯ ಪ್ರಥಮ ಅಧ್ಯಕ್ಷರಾಗಿ ಅನುಪಮ ಸೇವೆ, ಸೇವೆಗೆ ತಕ್ಕಂತಹ ಶ್ಲಾಘನೆ.

ಅರಸೀಕೆರೆ ತಾಲ್ಲೂಕಿನಲ್ಲಿ "ತಪಸ್ವಿ ಆಶ್ರಮ"ದ ಮತ್ತು ಹಾಸನದಲ್ಲಿ 'ದಿವ್ಯ ಚೈತನ್ಯ ಆಧ್ಯಾತ್ಮಿಕ ಕೇಂದ್ರ"ಗಳ ಸಂಸ್ಥಾಪನೆ.

ಅರಸೀಕೆರೆಯ ಬ್ರಾಹ್ಮಣ ಸಂಘದಲ್ಲಿ ಸಮುದಾಯ ಭವನ ಮತ್ತು ಶಿಕ್ಷಣ ಸಂಸ್ಥೆಗಳ ಸ್ಥಾಪನೆ.

ದತ್ತ ಪೀಠ ಚಿಕ್ಕಮಗಳೂರು ಸಹಿತ ಬಹುತೇಕ ಹಿಂದೂ ವೇದಿಕೆಗಳಿಗೆ ಕಾನೂನು ಸಲಹೆ. ಹೈಂದವಿ ಸಂಸ್ಕೃತಿಯನ್ನು ಉನ್ನತ ಶಿಖರಕ್ಕೆ ಕೊಂಡೊಯ್ಯುವಲ್ಲಿ ಪ್ರಾಮಾಣಿಕ ನಿರಂತರ ಪ್ರಯತ್ನ.

ಪ್ರತಿಷ್ಠಿತ ಅಯೋಧ್ಯಾ ಶ್ರೀ ರಾಮ ಜನ್ಮಭೂಮಿಯಲ್ಲಿನ ತೊಡಕುಗಳಿಗೆ VIP ನಿರ್ಮಿತ ಕಾನೂನು ಸಲಹಾ ಮಂಡಳಿಯ ಸದಸ್ಯರು.

ಶೃಂಗೇರಿ ಶಿವಗಂಗಾ ಮಠದ ಪ್ರಮುಖ ಅಭಿವೃದ್ಧಿ ಕಾರ್ಯದಲ್ಲಿ ನಿರಂತರ ಪ್ರಮುಖ ಪಾತ್ರ.

ಕಳೆದ 3 ದಶಕಗಳಿಂದ ಹಾರನಹಳ್ಳಿ ರಾಮಸ್ವಾಮಿ ಪ್ರತಿಷ್ಠಾನದ ಆಶ್ರಯದಲ್ಲಿ ದತ್ತಿ ಪ್ರದಾನ ಮತ್ತು ಧಾರ್ಮಿಕ ಚಟುವಟಿಕೆಗಳು.

ಪ್ರತಿಷ್ಠಿತ "ಆರ್ಯಭಟ", "ಕೆಂಪೇಗೌಡ", ಉಡುಪಿಯ ಅಷ್ಟ ಮಠಗಳ "ನ್ಯಾಯಸಿರಿ", ಮತ್ತು ಕರ್ನಾಟಕ ಸರ್ಕಾರದ ಬ್ರಾಹ್ಮಣ ಅಭಿವೃದ್ಧಿ ಪ್ರಾಧಿಕಾರದಿಂದ 'ವಿಪ್ರಭೂಷಣ" ಪ್ರಶಸ್ತಿಗಳು ಅರಸಿಬಂದಿದೆ.

ಆಲ್ ಇಂಡಿಯಾ ಬಾರ್ ಕೌನ್ಸಿಲ್‌ನಿಂದ ಅತಿ ಉತ್ತಮ ಅಡ್ವೋಕೇಟ್ ಜನರಲ್ ಪ್ರಶಸ್ತಿ ಮತ್ತು ಅನೇಕ ಪ್ರಶಸ್ತಿಗಳ ಪುರಸ್ಕೃತರು.

ಉಡುಪಿ ಅದಮಾರುಮಠದ ನೇತೃತ್ವದ ಕರ್ನಾಟಕ, ಮುಂಬೈ ಮತ್ತು ನವದೆಹಲಿಯ ಶಾಲೆಯಾದ ಪೂರ್ಣಪ್ರಜ್ಞಾ ಎಜುಕೇಶನ್ ಸೊಸೈಟಿಯ ಕಾರ್ಯಕಾರಿ ಸಮಿತಿ ಸದಸ್ಯರು.

ಶ್ರೀ ಶಂಕರ ಭಗವತ್ಪಾದರ ಸಂದೇಶ ಮತ್ತು ತತ್ವಜ್ಞಾನ ಪ್ರಚಾರ. ಶ್ರೀ ಯೋಗಾನಂದೇಶ್ವರ ಸರಸ್ವತಿ ಮಠದ ಪರಮಪೂಜ್ಯ ಶ್ರೀ ಶ್ರೀ ಶಂಕರ ಭಾರತಿ ಮಹಾಸ್ವಾಮಿಗಳ ನೇತೃತ್ವದ ದತ್ತಿ ಟ್ರಸ್ಟ್, ವೇದಾಂತ ಭಾರತಿ ಟ್ರಸ್ಟ್‌ನ ಟ್ರಸ್ಟಿಗಳು.

## ಮಹಾಸಭೆಯ ನೂತನ ಪದಾಧಿಕಾರಿಗಳು

### ಪ್ರಧಾನ ಕಾರ್ಯದರ್ಶಿ



ಮಹಾಸಭೆಯ ನೂತನ ಪ್ರಧಾನ ಕಾರ್ಯದರ್ಶಿಗಳಾಗಿ ನೇಮಕಗೊಂಡಿರುವ ಶ್ರೀ ಶ್ರೀಧರಮೂರ್ತಿ ಅವರು ಸರಿ ಸುಮಾರು 40 ದಶಕಗಳ ಕಾಲ ಬಿ.ಬಿ.ಎಂ.ಪಿ. ಯಲ್ಲಿ ಹಲವು ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ಸೆಕ್ರೆಟರಿ ಕೌನ್ಸಿಲ್ ಆಗಿ ನಿವೃತ್ತಿ ಹೊಂದಿದ್ದಾರೆ.

### ಖಜಾಂಚಿ



ಮಹಾಸಭೆಯ ನೂತನ ಖಜಾಂಚಿಗಳಾಗಿ ನೇಮಕ ಗೊಂಡಿರುವ ಶ್ರೀ ವೆಂಕಟೇಶ್ ಎಸ್. ನಾಯಕ್ ಅವರು ವೃತ್ತಿಯಲ್ಲಿ ಹಿರಿಯ ನ್ಯಾಯವಾದಿಗಳು ಹಾಗೂ ಲೇಬರ್ ಲಾ ತಜ್ಞರು. ಪ್ರಸ್ತುತ ದೇವಗಿರಿ ಶ್ರೀ ರಾಘವೇಂದ್ರ ಸ್ವಾಮಿ ಮಠದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

### ಸಂಘಟನಾ ಕಾರ್ಯದರ್ಶಿ



ಮಹಾಸಭೆಯ ನೂತನ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಡಾ॥ ಬಿ.ಎಸ್. ರಾಘವೇಂದ್ರ ಭಟ್ ಅವರು ವೃತ್ತಿಯಲ್ಲಿ ಕೃಷಿಕರು ಹಾಗೂ ಜ್ಯೋತಿಷಿಗಳು. ಪ್ರಸ್ತುತ ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿಯ ನಿರ್ದೇಶಕರಾಗಿ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ತಿನ ಕಾರ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.), ಬೆಂಗಳೂರು.

## ಕೇಂದ್ರ ಕಾರ್ಯಕಾರಿ ಸಮಿತಿ–ಪದಾಧಿಕಾರಿಗಳು

**ಅಧ್ಯಕ್ಷರು :**

ಶ್ರೀ ಅಶೋಕ ಹಾರನಹಳ್ಳಿ

**ಉಪಾಧ್ಯಕ್ಷರು :**

ಶ್ರೀ ಹೆಚ್.ಆರ್. ಸುರೇಶ್, ಬೆಂಗಳೂರು
ಶ್ರೀ ನಟರಾಜ ಭಾಗವತ್, ಶಿವಮೊಗ್ಗ
ಶ್ರೀ ಸಿ.ಕೆ. ರಾಮಮೂರ್ತಿ, ಬೆಂಗಳೂರು
ಶ್ರೀ ಡಿ.ವಿ. ರಾಜೇಂದ್ರಪ್ರಸಾದ್, ಬೆಂಗಳೂರು
ಡಾ|| ಆನಂದತೀರ್ಥ ಫಡ್ನೀಸ್, ರಾಯಚೂರು
ಶ್ರೀ ರವೀಂದ್ರ ಶ್ರೀಪಾದ ಮುತಾಲಿಕ್, ಬೆಳಗಾವಿ
ಶ್ರೀಮತಿ ಪುಷ್ಪ ಅಯ್ಯಂಗಾರ್, ಮೈಸೂರು
ಶ್ರೀ ಪ್ರಮೋದ್ ಮನೋಳಿ, ಹುಬ್ಬಳ್ಳಿ
ಶ್ರೀ ಶಶಿಭೂಷಣ್ ಹೆಗಡೆ, ಸಿದ್ದಾಪುರ
ಡಾ|| ಗಿರೀಶ್ ಆರ್.ಮಸೂರಕರ್, ಬಾಗಲಕೋಟೆ
ಶ್ರೀ ಮಹೇಶ್ ಕಜೆ, ಪುತ್ತೂರು

**ಪ್ರಧಾನ ಕಾರ್ಯದರ್ಶಿ**

ಶ್ರೀ ಎಸ್.ಶ್ರೀಧರಮೂರ್ತಿ, ಬೆಂಗಳೂರು

**ಖಜಾಂಚಿ :**

ಶ್ರೀ ವೆಂಕಟೇಶ ಎಸ್. ನಾಯಕ್, ಬೆಂಗಳೂರು

**ಸಹ ಖಜಾಂಚಿ :**

ಶ್ರೀ ಶ್ರೀನಿವಾಸಮೂರ್ತಿ, ಬೆಂಗಳೂರು

**ಆಂತರಿಕ ಲೆಕ್ಕಪರಿಶೋಧಕರು**

ಶ್ರೀ ಕೆ. ನಾರಾಯಣ್, ಬೆಂಗಳೂರು

**ಅಖಿಲ ಭಾರತ ಬ್ರಾಹ್ಮಣ ಒಕ್ಕೂಟಕ್ಕೆ ರಾಜ್ಯದ ಪ್ರತಿನಿಧಿ**

ಶ್ರೀ ಕೆ.ಎನ್. ಛಾಯಾಪತಿ, ಬೆಂಗಳೂರು

**ಸಂಘಟನಾ ಕಾರ್ಯದರ್ಶಿ**

ಡಾ|| ಬಿ.ಎಸ್. ರಾಘವೇಂದ್ರ ಭಟ್, ಬೆಂಗಳೂರು

**ಸಹ ಕಾರ್ಯದರ್ಶಿಗಳು**

ಶ್ರೀ ಹೆಚ್.ಸಿ.ಪುರುಷೋತ್ತಮ, ಬೆಂಗಳೂರು
ಶ್ರೀ ಮುರಳೀಧರ, ಬೆಂಗಳೂರು
ಶ್ರೀ ಟಿ.ಎಲ್.ಎಸ್. ಕುಮಾರ್, ಬೆಂಗಳೂರು
ಶ್ರೀ ಕಾರ್ತಿಕ್ ಎಸ್. ಬಾಪಟ್, ಬೆಂಗಳೂರು
ಶ್ರೀ ಮುರಳೀಧರ್ ಎಸ್ ಹೊಸಕೋಟೆ
ಶ್ರೀ ರಾಘವೇಂದ್ರ ಕುಲಕರ್ಣಿ, ಗುಲ್ಬರ್ಗಾ

**ಕೇಂದ್ರ ಕಾರ್ಯಕಾರಿ ಸಮಿತಿ**

ಶ್ರೀ ಎಂ.ವಿ. ಸತ್ಯನಾರಾಯಣ, ಬೆಂಗಳೂರು
ಶ್ರೀ ಬಿ.ಎಸ್. ರವಿಶಂಕರ್, ಬೆಂಗಳೂರು
ಶ್ರೀ ವೆಂಕಟೇಶ್ ದ್ವಾರಕನಾಥ್, ಬೆಂಗಳೂರು
ಶ್ರೀ ರಾಜೇಶ್ ಪ್ರಸಾದ್, ಬೆಂಗಳೂರು
ಶ್ರೀ ಸುನೀಲ್ ಪುರಾಣಿಕ್, ಬೆಂಗಳೂರು
ಶ್ರೀಮತಿ ಶಶಿಕಲಾ, ಬೆಂಗಳೂರು
ಶ್ರೀಮತಿ ಅಂಬಿಕಾ ರಾಮಚಂದ್ರನ್, ಬೆಂಗಳೂರು
ಶ್ರೀ ಜಿ.ಎಂ. ಹೆಗಡೆ, ಚಾಮರಾಜನಗರ
ಶ್ರೀಮತಿ ಪುಷ್ಪವಲ್ಲಿ ಭಟ್ಟ, ಬೆಂಗಳೂರು
ಶ್ರೀ ಜಯಸಿಂಹ ಎಲ್. ಬೆಂಗಳೂರು
ಶ್ರೀ ಅಸಗೋಡು ಜಯಸಿಂಹ, ಬೆಂಗಳೂರು
ಶ್ರೀ ಸತ್ಯೇಂದ್ರ ವಿ. ಬೆಂಗಳೂರು
ಶ್ರೀಮತಿ ಸಾವಿತ್ರಿ ರಮೇಶ್, ಬೆಂಗಳೂರು
ಶ್ರೀಮತಿ ಜಯಲತಾ ಸತ್ಯನಾರಾಯಣ, ಬೆಂಗಳೂರು
ಶ್ರೀ ಹಯಗ್ರೀವಾಚಾರ್, ಬೆಂಗಳೂರು
ಶ್ರೀ ಶ್ರೀನಿವಾಸರಾವ್ ಎಸ್.ಎಸ್. ಬೆಂಗಳೂರು
ಶ್ರೀ ಅರುಣ್ ಅಡಿಗ, ಬೆಂಗಳೂರು
ಶ್ರೀ ಪಿ.ಸಿ. ರಾವ್, ಬೆಂಗಳೂರು
ಶ್ರೀ ಕೃಷ್ಣಾನಂದ ಛಾತ್ರ, ಕುಂದಾಪುರ
ಶ್ರೀ ಎಂ.ಅನಂತ್, ಬೆಂಗಳೂರು
ಶ್ರೀ ಪುಟ್ಟಣ್ಣ, ಬೆಂಗಳೂರು
ಶ್ರೀ ಪ್ರಕಾಶ್ ವಸಿಷ್ಠ, ಬೆಂಗಳೂರು
ಶ್ರೀ ಎನ್.ಎಸ್. ತಾರಾನಾಥ್, ಬೆಂಗಳೂರು
ಶ್ರೀ ಎಂ.ಆರ್. ಮಂಜುನಾಥ್, ಬೆಂಗಳೂರು
ಶ್ರೀ ಅನಂತರಾಮ್ ಸಿ.ಆರ್. ಬೆಂಗಳೂರು
ಶ್ರೀ ಎನ್.ಎಸ್. ನರಸಿಂಹಮೂರ್ತಿ, ಬೆಂಗಳೂರು
ಶ್ರೀ ಕೆ.ಎನ್. ಸತ್ಯಮೂರ್ತಿ, ಬೆಂಗಳೂರು ಉತ್ತರ
ಶ್ರೀ ಕೃಷ್ಣಸ್ವಾಮಿ ಸುಬ್ಬರಾವ್, ಬೆಂಗಳೂರು
ಶ್ರೀ ಎಂ. ನರಸಿಂಹನ್, ಬೆಂಗಳೂರು
ಶ್ರೀ ಸಿ.ಎನ್. ರಮೇಶ್ ತುಮಕೂರು
ಶ್ರೀ ರಾಘವೇಂದ್ರ ನಾಡಗೌಡ, ಕಲ್ಬುರ್ಗಿ
ಶ್ರೀ ಎಸ್.ಪಿ.ಸತ್ಯನಾರಾಯಣರಾವ್, ದಾವಣಗೆರೆ
ಶ್ರೀ ಕೇಶವಪ್ರಸಾದ್, ಬೆಂಗಳೂರು
ಶ್ರೀ ಜೆ.ಎನ್. ರಾಘವೇಂದ್ರರಾವ್, ಚಿಕ್ಕಬಳ್ಳಾಪುರ
ಶ್ರೀಮತಿ ನಂದಿನಿ ವಿಜಯವಿಠ್ಠಲ, ಬೆಂಗಳೂರು
ಶ್ರೀ ಸತೀಶ್ ಉರಾಳ್ ಕೆ ಬೆಂಗಳೂರು
ಶ್ರೀ ಟಿ.ಹೆಚ್ ಚಂದ್ರಶೇಖರ್, ಹಾಸನ
ಶ್ರೀ ಎನ್.ಎಸ್. ಗೋಪಾಲ್, ಹಾಸನ
ಶ್ರೀ ವಿಜಯಕೇಶವ ಸಿ.ಆರ್. ಬೇಲೂರು
ಶ್ರೀನಾರಾಯಣ ಗೋವಿಂದ ಹೆಗಡೆ, ಅಂಕೋಲಾ
ಶ್ರೀ ಶ್ರೀನಾಥ್, ಚಿಂತಾಮಣಿ
ಶ್ರೀ ಅಟ್ಟೂರು ವೆಂಕಟೇಶಯ್ಯ, ಚಿಕ್ಕಬಳ್ಳಾಪುರ ಜಿಲ್ಲೆ.
ಡಾ. ಅಂಜನ್ ಕುಮಾರ್ ಶರ್ಮ, ಕೋಲಾರ
ಶ್ರೀ ರಮೇಶ್ ಎಸ್.ಎನ್. ಚಿಕ್ಕಬಳ್ಳಾಪುರ
ಶ್ರೀ ಶಂಕರನಾರಾಯಣ ಶಾಸ್ತ್ರಿ, ಮಂಡ್ಯ
ಶ್ರೀ ನಟರಾಜ ಜೋಯಿಸ್, ಮೈಸೂರು
ಶ್ರೀ ಶ್ರೀಕಾಂತ್ ಎನ್. ಶಿಡ್ಲಘಟ್ಟ
ಶ್ರೀ ಸಿ.ಎನ್. ನಾಗೇಶ್, ಚಿಂತಾಮಣಿ
ಶ್ರೀ ಪಿ.ಆರ್. ಪ್ರಕಾಶ್, ಬೆಂಗಳೂರು
ಶ್ರೀ ಕೆ. ನಾಗಭೂಷಣರಾವ್, ಬೆಂಗಳೂರು
ಶ್ರೀ ಹೆಚ್.ಎಸ್. ಶಂಕರ್‌ಪ್ರಸಾದ್, ಬೆಂಗಳೂರು
ಶ್ರೀ ಆರ್.ಡಿ. ಕುಲಕರ್ಣಿ, ಧಾರವಾಡ
ಶ್ರೀ ನಂ. ಶ್ರೀಕಂಠಕುಮಾರ್, ಮೈಸೂರು
ಶ್ರೀ ಪವನ್‌ಕುಮಾರ್, ಬೆಂಗಳೂರು
ಶ್ರೀ ವಿನೀತ ಶಾಮಭಟ್, ಬೆಂಗಳೂರು
ಶ್ರೀ ಎನ್.ಎನ್. ವಿಶ್ವನಾಥ್, ಬೆಂಗಳೂರು
ಶ್ರೀ ಬಿ.ಆರ್. ವಿಶ್ವನಾಥ್, ಬೆಂಗಳೂರು
ಶ್ರೀ ಕಿಕ್ಕೇರಿ ಕೃಷ್ಣಮೂರ್ತಿ, ಬೆಂಗಳೂರು
ಶ್ರೀ ಹೆಚ್.ಕೆ. ಶ್ರೀನಿವಾಸ್, ಬೆಂಗಳೂರು
ಶ್ರೀ ದಿನೇಶ್ ಹೆಚ್.ಎಸ್. ಹೊಸಕೋಟೆ ತಾ||
ಶ್ರೀ ಬಿ.ವಿ. ಶಶಿಧರ್, ದೇವನಹಳ್ಳಿ ತಾ||
ಶ್ರೀ ಆರ್. ಸತ್ಯನಾರಾಯಣ, ಬೆಂಗಳೂರು
ಶ್ರೀ ಎನ್. ಅನಂತಮೂರ್ತಿ ಶರ್ಮ, ಬೆಂಗಳೂರು
ಶ್ರೀ ಆರ್.ಎನ್. ಸ್ವಾಮಿ, ಬೆಂಗಳೂರು
ಶ್ರೀ ಟಿ.ಎನ್. ರಮೇಶ್, ಬೆಂಗಳೂರು
ಶ್ರೀ ಮಂಜುನಾಥ ಜೋಶಿ, ಚಿಕ್ಕಮಗಳೂರು
ಶ್ರೀ ಎನ್.ಕೆ. ಅಶ್ವಿನ್, ಚಿಕ್ಕಮಗಳೂರು
ಶ್ರೀ ಜಿ.ಎಂ. ಸತೀಶ್, ಶೃಂಗೇರಿ
ಶ್ರೀ ಪುರುಷೋತ್ತಮಾಚಾರ್, ಬೆಂಗಳೂರು
ಶ್ರೀ ಟಿ.ಎಲ್. ಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ಎ.ಎಂ.ನಾಗೇಶ್, ಬೆಂಗಳೂರು
ಶ್ರೀ ಶ್ರೀವತ್ಸ ಜಿ. ಬೆಂಗಳೂರು
ಶ್ರೀ ವಿಶ್ವೇಶ್ವರ ಭಟ್, ಬೆಂಗಳೂರು
ಶ್ರೀ ಬಿ.ಎಸ್. ಗಿರಿಧರ್, ಬೆಂಗಳೂರು
ಶ್ರೀ ಸಂದೀಪ್ ರವಿ, ಬೆಂಗಳೂರು
ಶ್ರೀ ಅನಿರುದ್ಧ, ಬೆಂಗಳೂರು
ಶ್ರೀ ಜಯಸಿಂಹ, ಮೈಸೂರು
ಶ್ರೀ ಕೇಶವಪ್ರಸಾದ್ ಎಸ್.ಎಂ. ಬೆಂಗಳೂರು

ಶ್ರೀ ಕೃಷ್ಣಪ್ರಸಾದ್. ಎಸ್.ಓ. ಪಿರಿಯಾಪಟ್ಟಣ
ಶ್ರೀ ಬಿ.ವಿ. ಶೇಷಾದ್ರಿ, ಶ್ರೀರಂಗಪಟ್ಟಣ
ಶ್ರೀಮತಿ ಸವಿತಾ ಹರೀಶ್, ದಾವಣಗೆರೆ
ಶ್ರೀ ಉಮೇಶ್ ಎಲ್.ಶಾಸ್ತ್ರಿ, ಬೆಂಗಳೂರು
ಡಾ. ಕೆ.ವಿ. ಲಕ್ಷ್ಮೀದೇವಿ, ಮೈಸೂರು
ಶ್ರೀ ಡಿ.ಎನ್. ವೆಂಕಟೇಶ್ ಮೂರ್ತಿ, ಹಾಸನ
ಶ್ರೀ ತಾರಾನಾಥ್ ಹೊಳ್ಳ, ಸಾಲಿಗ್ರಾಮ, ಉಡುಪಿಜಿಲ್ಲೆ
ಶ್ರೀ ಎ. ಚನ್ನಕೇಶವ ಭಟ್, ಕುಂದಾಪುರ ತಾ॥
ಶ್ರೀ ಪ್ರದೀಪ್‌ಕುಮಾರ್, ಉಡುಪಿ
ಶ್ರೀ ಅಂಬರೀಶ್ ವಿಠಲ್, ಬೆಂಗಳೂರು
ಶ್ರೀಮತಿ ಮಮತಾ ರಮೇಶ್, ಮಂಡ್ಯ
ಶ್ರೀ ಕೆ.ಎನ್. ಸ್ವರೂಪ್, ಹೊಸನಗರ
ಶ್ರೀ ವೆಂಕಟೇಶ್ ಹೆಚ್. ಪ್ರಭು, ಬೆಂಗಳೂರು
ಶ್ರೀ ಉಮೇಶ್ ರಾಮಚಂದ್ರ, ಬೆಂಗಳೂರು
ಶ್ರೀಮತಿ ರೂಪ ಮೋಹನ್, ಬೆಂಗಳೂರು
ಶ್ರೀಮತಿ ಎಸ್.ಶಾಂತಾಕುಮಾರಿ, ಚಿಕ್ಕಮಗಳೂರು
ಶ್ರೀ ದಿವಾಕರ್, ಬೆಂಗಳೂರು
ಶ್ರೀ ಎನ್.ಎಸ್. ಸತೀಶ್, ಬೆಂಗಳೂರು
ಶ್ರೀ ಪೊಳಲಿ ಗಿರಿಪ್ರಕಾಶ್ ತಂತ್ರಿ, ದ.ಕ. ಜಿಲ್ಲೆ.
ಶ್ರೀ ಸಿ.ಹೆಚ್. ಪ್ರಭಾಕರ್, ಬೆಂಗಳೂರು
ಶ್ರೀ ಹೆಚ್.ಎಸ್. ರಾಘವೇಂದ್ರ, ತುಮಕೂರು
ಶ್ರೀಮತಿ ಛಾಯಾ ರಾಮಶೇಷ, ತುಮಕೂರು
ಶ್ರೀ ಆರ್.ಎ. ಸತ್ಯನಾರಾಯಣ, ಮೈಸೂರು
ಶ್ರೀ ಕೆ.ಸಿ. ಪ್ರಭಾಕರ, ಬೆಂಗಳೂರು
ಶ್ರೀ ಗುರುರಾಜ್ ಎಲ್.ನಾಡಿಗೇರ್, ರಾಣಿಬೆನ್ನೂರು
ಶ್ರೀ ಉಮೇಶ ವಿ. ವಿಶ್ವರೂಪ, ರಾಣಿಬೆನ್ನೂರು
ಶ್ರೀ ರವಿಕುಮಾರ್ ಎಸ್.ಎಸ್. ಶಿವಮೊಗ್ಗ
ಶ್ರೀ ಅರವಿಂದ ಕುಲಕರ್ಣಿ, ರಾಯಚೂರು
ಶ್ರೀ ಎಸ್.ಜೆ. ಶ್ರೀಧರ್, ದಾವಣಗೆರೆ
ಶ್ರೀ ಪ್ರಾಣೇಶ್ ಮುತಾಲಿಕ್, ರಾಯಚೂರು
ಶ್ರೀ ದಿವಾಕರ ಕೆ. ಬಳ್ಳಾರಿ
ಶ್ರೀ ಬಾಲಸುಬ್ರಹ್ಮಣ್ಯ ಜಿ.ಬಿ. ಕನಕಪುರ
ಶ್ರೀ ಆರ್. ರವಿಕುಮಾರ್, ಬೆಂಗಳೂರು
ಶ್ರೀ ರಾಘವೇಂದ್ರ ಚೂಡಾಮಣಿ, ರಾಯಚೂರು
ಶ್ರೀ ರಮೇಶ್ ಹೊಳ್ಳ, ಮಡಿಕೇರಿ
ಶ್ರೀ ಎಚ್. ಉಮೇಶ್, ಹೊಸಪೇಟೆ
ಶ್ರೀ ಕಳೆಕೋರಿಸೂರ್ಯನಾರಾಯಣಭಟ್,ದ.ಕ.ಜಿಲ್ಲೆ
ಶ್ರೀ ನಾರಾಯಣರಾವ್, ಗಂಗಾವತಿ
ಶ್ರೀ ಗುರುರಾಜ ವಾದಿರಾಜ್ ಬಲಗನೂರು, ಗದಗ
ಡಾ॥ ವಿ. ಹನುಮಂತ ಡಂಬಲ್, ಧಾರವಾಡ
ಶ್ರೀ ವಿಜಯೇಂದ್ರ ಗುರುನಾಥ ನಾಡಜೋಶಿ, ಹುಬ್ಬಳ್ಳಿ
ಶ್ರೀ ವೆಂಕಟೇಶ್ ಮೊರ್ಕಂಡಿಕರ್, ಬೀದರ್
ಶ್ರೀ ಮಂಜುನಾಥ ಶಾಸ್ತ್ರಿ, ಬೆಂಗಳೂರು
ಶ್ರೀ ಶ್ರೀನಿವಾಸರಾವ್ ದಾನಪುರ, ಬಳ್ಳಾರಿ
ಶ್ರೀಮತಿ ಭಾರತಿ ನಂದಕುಮಾರ್, ಹುಬ್ಬಳ್ಳಿ
ಶ್ರೀ ನಿಖಿಲ್ ಭಾರಧ್ವಾಜ್, ಬೆಂಗಳೂರು
ಶ್ರೀ ಎನ್.ಜಿ. ನಾಗರಾಜ್, ಬೆಂಗಳೂರು
ಶ್ರೀ ಎಸ್. ದತ್ತರಾಮ್, ಬೆಂಗಳೂರು
ಶ್ರೀ ಆರ್. ಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ಪ್ರಸಾದ್ ಹೆಗಡೆ, ಉ.ಕ. ಜಿಲ್ಲೆ
ಶ್ರೀ ಮಹೇಶ್ ಜಿ. ದೇಶಪಾಂಡೆ, ವಿಜಯಪುರ
ಶ್ರೀ ವಿ. ಸುರೇಶ್ ಶಾಸ್ತ್ರಿ, ಬೆಂಗಳೂರು
ಶ್ರೀ ಬಿ.ಎನ್. ಮಧುಕರ್, ಬೆಂಗಳೂರು
ಶ್ರೀಹರಿಅರವಿಂದರಾವ್‌ಗೋಲ್‌ಸಂಗಿ,ವಿಜಯಪುರ
ಶ್ರೀ ಕೃಷ್ಣಶಿವರಾಮ ಭಟ್ಟ, ಉತ್ತರ ಕನ್ನಡ ಜಿಲ್ಲೆ
ಶ್ರೀಮತಿ ಪ್ರಿಯ ಪುರಾಣಿಕ್, ಬೆಳಗಾವಿ
ಶ್ರೀ ವಿಲಾಸ್ ಜೋಶಿ, ಬೆಳಗಾವಿ
ಶ್ರೀ ಪ್ರಕಾಶ ಎಂ. ಪೂಜಾರಿ, ಬಾಗಲಕೋಟೆ ಜಿಲ್ಲೆ
ಶ್ರೀ ಎನ್.ವಿ. ರಾವ್, ಬೆಂಗಳೂರು
ಶ್ರೀ ಕೌಶಿಕ್ ಎಂ.ಕಾಂ.ಇ, ಬೆಂಗಳೂರು
ಶ್ರೀ ನಿತಿನ್ ಸುಧೀಂದ್ರ,
ಜಮಖಂಡಿ, ಬಾಗಲಕೋಟೆ ಜಿಲ್ಲೆ
ಶ್ರೀ ಪ್ರಶಾಂತ್ ಕೊರಳ್ಳಿ, ಕಲ್ಬುರ್ಗಿ
ಶ್ರೀ ಎಸ್.ಎಂ. ಕುಲಕರ್ಣಿ, ಬೆಳಗಾವಿ
ಡಾ॥ ಸಿ.ಎ. ಕಿಶೋರ್, ಬೆಂಗಳೂರು
ಶ್ರೀ ಹರಿಪ್ರಸಾದ, ಸುಳ್ಯ ತಾಲ್ಲೂಕು
ಶ್ರೀ ರಂಗನಾಥ ದೇಸಾಯಿ, ಕಲ್ಬುರ್ಗಿ
ಶ್ರೀ ಕೆ.ಜಿ. ರಾಘವೇಂದ್ರ, ಸಾಗರ
ಶ್ರೀ ಮಂಜುನಾಥ ಕುಲಕರ್ಣಿ, ಕಲ್ಬುರ್ಗಿ
ಶ್ರೀ ಬಿ.ಎಸ್. ಸತ್ಯನಾರಾಯಣ, ಬೆಂಗಳೂರು

**ಹಿರಿಯರ ಪರಿಷತ್**

ಡಾ॥ ಎಂ.ಆರ್.ವಿ. ಪ್ರಸಾದ್, ಬೆಂಗಳೂರು
ಶ್ರೀ ಡಿ.ಎಸ್. ಹೊನ್ನಪ್ಪ, ಬೆಂಗಳೂರು
ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ, ಬೆಂಗಳೂರು
ಶ್ರೀಮತಿ ಸೀತಾಸುಬ್ರಹ್ಮಣ್ಯ, ಬೆಂಗಳೂರು
ಶ್ರೀ ಹೆಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ, ಬೆಂ.
ವೇ॥ಬ್ರ॥ ಶ್ರೀ ವಿ.ಭಾನುಪ್ರಕಾಶ್‌ಶರ್ಮ,ಶ್ರೀರಂಗಪಟ್ಟಣ
ಶ್ರೀ ಎಂ.ಬಿ. ಭಾನುಪ್ರಕಾಶ್, ಶಿವಮೊಗ್ಗ

## ಕಾರ್ಯಕಾರಿ ಸಮಿತಿ ಸದಸ್ಯರ ಜವಾಬ್ದಾರಿ ಕರ್ತವ್ಯಗಳು

–ಹೊ.ನಾ. ಹಿರಿಯಣ್ಣಸ್ವಾಮಿ

ನೂತನವಾಗಿ ನೇಮಕಗೊಂಡ ಕಾರ್ಯಕಾರಿ ಸಮಿತಿ ಸದಸ್ಯರಾದ ನಿಮಗೆ ಮಹಾಸಭೆಯ ಪರವಾಗಿ ಹಾರ್ದಿಕ ಶುಭಾಶಯಗಳು. ಈ ಸುಸಂದರ್ಭದಲ್ಲಿ ನಾವೆಲ್ಲರೂ ಒಟ್ಟಿಗೆ ಸೇರಿ, ಉತ್ತಮವಾಗಿ ಕೆಲಸ ಮಾಡಿ, ಮಹಾಸಭೆಯನ್ನು ರಾಜ್ಯದ ಮುಖವಾಣಿಯಾಗಿಸೋಣ. ಈ ದಿಶೆಯಲ್ಲಿ ಸದಸ್ಯರ ಜವಾಬ್ದಾರಿ–ಕರ್ತವ್ಯಗಳನ್ನು ನೆನಪಿಸುತ್ತಿದ್ದೇನೆ.

1) **ಬ್ರಾಹ್ಮಣರ ಅಂತಃಸತ್ವವೇ ಧೀ ಶಕ್ತಿ.** ಸನಾತನ ವೈದಿಕ ಧರ್ಮದ ಪರಿಪಾಲನೆ, ಋಜು ನಡವಳಿಕೆ. ವೈದಿಕ ಧರ್ಮದ ಭದ್ರಬುನಾದಿಯಾದ ಸತ್ಯ–ಋತ–ಧರ್ಮಗಳನ್ನು ನಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳೋಣ.
2) ಬ್ರಾಹ್ಮಣ ಸಮಾಜದ ಮತಧರ್ಮಗಳಿಗೆ ಅನುಸಾರವಾಗಿ ಹಬ್ಬ–ಹರಿದಿನಗಳನ್ನು ಸಾಂಪ್ರದಾಯಕವಾಗಿ ಸರಳವಾಗಿ ಆಚರಿಸೋಣ.
3) ಸಿರಿವಂತ ಸದಸ್ಯರು, ಕೈಗಾರಿಕಾ ಉದ್ಯಮಿಗಳು ವಿಪ್ರರನ್ನೇ ಉದ್ಯೋಗಿಗಳಾಗಿ ನೇಮಕ ಮಾಡುವಂತಾಗಲಿ. ಅತ್ಯಂತ ದುರ್ಬಲ ಅವಸ್ಥೆಯಲ್ಲಿರುವ ಬ್ರಾಹ್ಮಣರಿಗೆ, ಗ್ರಾಮೀಣ ಪ್ರದೇಶಗಳಲ್ಲಿರುವ ನಮ್ಮವರಿಗೆ ಶಕ್ತಿ ಮೀರಿ ಸಹಾಯ ಮಾಡೋಣ.
4) ಗ್ರಾಮಗಳು, ಜಿಲ್ಲೆಗಳಲ್ಲಿರುವ, ಇನ್ನು ಸದಸ್ಯರಾಗಿರದ ಬ್ರಾಹ್ಮಣರನ್ನು ವೈಯಕ್ತಿಕವಾಗಿ, ಇನ್ನಿತರ ಸಂಪರ್ಕ ಸಾಧನಗಳ ಮೂಲಕ ಭೇಟಿ ಮಾಡಿ ಸದಸ್ಯತ್ವ ಅಭಿಯಾನವನ್ನು ಹೆಚ್ಚಿಸೋಣ. ಪ್ರಜಾಸತ್ತಾತ್ಮಕ ದೇಶದಲ್ಲಿ ಮತಸಂಖ್ಯೆಯೇ ಪ್ರಮುಖವಾದ್ದರಿಂದ ರಾಜಕೀಯ ದೃಷ್ಟಿಯಿಂದಲೂ ನಮ್ಮ ಜನಾಂಗದ ಸಂಖ್ಯೆ ಜಾಸ್ತಿಯಾಗಲೇಬೇಕು.
5) ವೈಯಕ್ತಿಕ, ಕೌಟುಂಬಿಕ ಹಿತಕ್ಕಿಂತ ಬ್ರಾಹ್ಮಣ ಸಮಾಜದ ಒಳಿತೇ ಪರಮವಾದದ್ದು ಎಂದು ಭಾವಿಸಿ ಅದಕ್ಕಾಗಿ ಶ್ರಮಿಸೋಣ.
6) ಮಹಾಸಭೆ ಕರೆಕೊಟ್ಟಾಗ ಸಭೆಗಳು, ಕಾರ್ಯಕ್ರಮಗಳಲ್ಲಿ ತಾವೂ ಭಾಗವಹಿಸಿ, ಹೊಸಬರು ಪಾಲ್ಗೊಳ್ಳುವಂತೆ ಮಾಡಿ. **ದಯವಿಟ್ಟು ಮಹಾಸಭೆಯೊಂದಿಗೆ ನಿರಂತರ ಸಂಪರ್ಕದಲ್ಲಿರಿ.**

# ವಿಪ್ರ ವರೇಣ್ಯರಿಗೆ ಪದ್ಮಶ್ರೀ ಗೌರವ

**ಶ್ರೀ ಹೆಚ್.ಆರ್. ಕೇಶವಮೂರ್ತಿ,**
**ಖ್ಯಾತ ಗಮಕ ಕಲಾವಿದರು**



ಫೆಬ್ರವರಿ 22, 1934ರಂದು ಜನಿಸಿದ ಹೆಚ್.ಆರ್. ಕೇಶವಮೂರ್ತಿಯವರು ಗಮಕದ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ಅವರ ಕೊಡುಗೆ ಅಪಾರ ಮತ್ತು ಅನನ್ಯವಾಗಿದೆ. ವಾರಣಾಸಿ, ಕಾನ್ಪುರ, ಜೈಪುರ, ಮುಂಬೈ, ಪುನಾ ಘರಾಣೆಗಳಂತೆಯೇ ಕೇಶವಮೂರ್ತಿಯವರ ಶೈಲಿ ಕೂಡ ಖ್ಯಾತಿ ಪಡೆದುಕೊಂಡಿದೆ.

ಶಿವಮೊಗ್ಗ ಸಮೀಪದ ಹೊಸಹಳ್ಳಿ ಗ್ರಾಮದಲ್ಲಿ ಜನಿಸಿದ್ದ ಕೇಶವಮೂರ್ತಿ ಅವರದ್ದು ಕೃಷಿಕ ಮನೆತನ. ತಂದೆ ರಾಮಸ್ವಾಮಿ ಶಾಸ್ತ್ರಿಗಳು ಸಂಸ್ಕೃತ ವಿದ್ವಾಂಸರು, ಜೊತೆಗೆ ಗಾಯಕರು. ತಾಯಿ ಲಕ್ಷ್ಮೀದೇವಮ್ಮ, ಇವರ ಕಲೆ ಸಾಧನೆಯಿಂದಾಗಿ ಇದೀಗ ಹೊಸಹಳ್ಳಿಯ ಗಮಕ ಗ್ರಾಮ ಎಂದೇ ಖ್ಯಾತಿ ಪಡೆಯುತ್ತಿದೆ.

ಕೇಶವಮೂರ್ತಿಗಳು ಕಳೆದ 40ಕ್ಕೂ ಹೆಚ್ಚು ವರ್ಷಗಳಿಂದ ನಿರಂತರವಾಗಿ ಗಮಕ ಕಾರ್ಯಕ್ರಮಗಳನ್ನು ನೀಡುತ್ತ ಬಂದಿದ್ದಾರೆ. ಹಿರಿಯ ವ್ಯಾಖ್ಯಾನಕಾರರಾಗಿದ್ದ ವ್ಯಾಖ್ಯಾನದೊಂದಿಗೆ ಸಮಗ್ರ ಕುಮಾರವ್ಯಾಸ ಭಾರತದ 135 ಧ್ವನಿಸುರಳಿಗಳು, ಮಾರ್ಕಂಡೇಯ ಅವಧಾನಿ ಅವರ ವ್ಯಾಖ್ಯಾನದೊಂದಿಗೆ 35 ಧ್ವನಿಸುರಳಿಗಳಲ್ಲಿ ಜೈಮಿನಿ ಭಾರತ ಹೊರಬಂದಿದೆ. ಹೆಗ್ಗೋಡು, ಮತ್ತೂರು, ಶಿವಮೊಗ್ಗ, ಮೈಸೂರು, ಬೆಂಗಳೂರು, ಗದಗ ಹಾಗೂ ಹೊರರಾಜ್ಯಗಳಲ್ಲೂ ಅನೇಕ ಕಾರ್ಯಕ್ರಮಗಳನ್ನು ನೀಡಿರುತ್ತಾರೆ. ಹೊಸಹಳ್ಳಿಯ ಗಮಕ ಕಲಾಪರಿಷತ್ತಿನ ಅಧ್ಯಕ್ಷರಾಗಿ ಗಮಕ ತರಗತಿಗಳಿಗೆ ಗಮಕ ಶಿಕ್ಷಣ ನೀಡಿದ ಹಿರಿಮೆ ಕೇಶವಮೂರ್ತಿ ಅವರದ್ದಾಗಿದೆ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಹಾಗೂ ವಿಪ್ರನುಡಿ ಕೇಂದ್ರ ಸರ್ಕಾರದ ಪದ್ಮಶ್ರೀಪ್ರಶಸ್ತಿ ಪುರಸ್ಕೃತರಾದ ತಮಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ.**

**ಡಾ|| ಸುಬ್ಬಣ್ಣ ಐಪ್ಪನ್**
**ಖ್ಯಾತ ಕೃಷಿ ವಿಜ್ಞಾನಿಗಳು**



ಭಾರತದ ಖ್ಯಾತ ಕೃಷಿ ವಿಜ್ಞಾನ-ವಿಜ್ಞಾನಿಯಾಗಿರುವ ಡಾ|| ಸುಬ್ಬಣ್ಣ ಅಯ್ಯಪ್ಪನ್ ಅವರು, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ (ICAR) ಡೈರೆಕ್ಟರ್ ಜನರಲ್ ಆಗಿ ಕಾರ್ಯ ನಿರ್ವಹಿಸಿರುತ್ತಾರೆ. ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯ, ಇಂಫಾಲ ಇಲ್ಲಿ ಕುಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಭಾರತ ಸರ್ಕಾರದ ಕೃಷಿ ಹಾಗೂ ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾಗಿಯೂ ಕಾರ್ಯ ನಿರ್ವಹಿಸಿರುತ್ತಾರೆ. ಕೃಷಿ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಅಮೂಲ್ಯವಾದ ಕೊಡುಗೆಗಾಗಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವ ಶ್ರೀಯುತರು ಅಪ್ಪಟ ಕನ್ನಡಿಗರಾಗಿದ್ದಾರೆ ಇವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವತಿಯಿಂದ ಹೃತ್ಪೂರ್ವಕ ಅಭಿನಂದನೆಗಳು.

## ತ್ರಿವಿಕ್ರಮ ಜೋಷಿ ಅವರಿಗೆ ಶ್ರೀ ಪುರಂದರ ಅನುಗ್ರಹ ಪ್ರಶಸ್ತಿ



**ಬೆಂಗಳೂರು: ತಿರುಮಲ ತಿರುಪತಿ ದೇವಸ್ಥಾನದ (ಟಿಟಿಡಿ) ದಾಸಸಾಹಿತ್ಯ ಪ್ರಾಜೆಕ್ಟ್‌ನಿಂದ ರಾಯಚೂರಿನ ತ್ರಿವಿಕ್ರಮ ಜೋಷಿ ಅವರಿಗೆ ಶ್ರೀ ಪುರಂದರ ಅನುಗ್ರಹ ಪ್ರಶಸ್ತಿಯನ್ನು ನೀಡಿದ್ದಾರೆ. ಶ್ರೀಯುತರು ಮಹಾಸಭಾದಲ್ಲಿ ಹಿಂದಿನ ಪದಾಧಿಕಾರಿಗಳಾಗಿ ಸೇವೆ ಸಲಿಸಿದ್ದಾರೆ. ಅವರು ಸಲ್ಲಿಸಿರುವ ಸೇವೆಯು ಶ್ಲಾಘನೀಯ ವಾದುದು.ಶ್ರೀಯುತರಿಗೆ ಮಹಾಸಭಾ ಪರವಾಗಿ ಅಭಿನಂದನೆಗಳು.**

## ಪಂಡಿತ್ ವೆಂಕಟೇಶ್ ಕುಮಾರ್‌ಗೆ ಕಾಳಿದಾಸ ಸಮ್ಮಾನ್



**ಹೆಸರಾಂತ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತಗಾರ ಪದ್ಮಶ್ರೀ ಪ್ರೊ|| ಎಂ. ವೆಂಕಟೇಶ್ ಕುಮಾರ ವರು ಮಧ್ಯಪ್ರದೇಶ ಸರ್ಕಾರ ನೀಡುವ ಪ್ರತಿಷ್ಠಿತ 'ಕಾಳಿದಾಸ ಸಮ್ಮಾನ' ಪ್ರಶಸ್ತಿಗೆ ಭಾಜನರಾಗಿದ್ದಾರೆ.**

ವೆಂಕಟೇಶ್ ಕುಮಾರ್ ಅವರಿಗೆ ಈಗಾಗಲೇ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪದ್ಮಶ್ರೀ ಸೇರಿದಂತೆ ಸಂಗೀತ ಕ್ಷೇತ್ರದ ಸಾಧನೆಗಾಗಿ ಅನೇಕ ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಅವೆಲ್ಲವುದರ ಜೊತೆಗೆ ಈಗ ಮಧ್ಯ ಪ್ರದೇಶ ಸರ್ಕಾರ ಕೊಡಮಾಡಿರುವ ಕಾಳಿದಾಸ್ ಸಮ್ಮಾನ್ ಪ್ರಶಸ್ತಿ ದೊರೆತಿರುವದು ನಿಜಕ್ಕೂ ಹೆಮ್ಮೆಯ ವಿಚಾರ. **ಈ ಸುಸಂದರ್ಭದಲ್ಲಿ ವೆಂಕಟೇಶ್ ಕುಮಾರ್ ಅವರ ಕೀರ್ತಿ ಇನ್ನಷ್ಟು ಪಸರಿಸಲಿ, ಸಂಗೀತ ಶಾರದೆ ಅವರನ್ನು ಸದಾ ಹರಸಲಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾರೈಸುತ್ತದೆ.**



**ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ಚುನಾಯಿತಗೊಂಡು ಅಧ್ಯಕ್ಷ ಪದವಿಯನ್ನು ಅಲಂಕರಿಸಿರುವ ನಾಡೋಜ ಡಾ|| ಮಹೇಶ್ ಜೋಷಿ ಅವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹೃತ್ಪೂರ್ವಕ ಅಭಿನಂದನೆಗಳು**

# ಅಧ್ಯಕ್ಷರ ಯೋಚನೆ-ಯೋಜನೆಗಳು

**-ಶ್ರೀ ಅಶೋಕ ಹಾರನಹಳ್ಳಿ ಅವರೊಂದಿಗೆ ಸಂದರ್ಶನ**

ಸನ್ಮಾನ್ಯ ಅಧ್ಯಕ್ಷರಿಗೆ ನಮಸ್ಕಾರ.

ಈ ಹಿಂದಿನ ಎಲ್ಲ ಚುನಾವಣೆಗಳಿಗಿಂತ ಪ್ರಬಲ ಪೈಪೋಟಿಯಿಂದ ಕೂಡಿದ ಅಭೂತಪೂರ್ವ ಚುನಾವಣೆಯಲ್ಲಿ ತಾವು ಜಯಶೀಲರಾಗಿ ಈ "ಸಂಕ್ರಮಣ" ಕಾಲದಲ್ಲಿ ಮಹಾಸಭೆಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದೀರಿ. ಈ ಸಂದರ್ಭದಲ್ಲಿ ತಮಗೆ ವಿಪ್ರನುಡಿ ಹಾಗೂ ಕರ್ನಾಟಕದ ಸಮಸ್ತ ಬ್ರಾಹ್ಮಣ ಸಮುದಾಯದ ಪರವಾಗಿ ಹಾರ್ದಿಕ ಅಭಿನಂದನೆಗಳು.

**ಸಂಪಾದಕ : ಈ ಬಾರಿ ಮಹಾಸಭೆಯ ಅಧ್ಯಕ್ಷೀಯ ಚುನಾವಣೆ ಅತ್ಯಂತ ವೈಶಿಷ್ಟ್ಯ ಹಾಗೂ ಮಹತ್ವಪೂರ್ಣವಾಗಿದ್ದು ಹೇಗೆ ?**

ಮೊದಲನೆಯದಾಗಿ ಕಳೆದೆರೆಡು ವರ್ಷಗಳಿಂದ ಕೋವಿಡ್ ಪಿಡುಗು, ಆರ್ಥಿಕ ಸಂಕಷ್ಟ ಹಾಗೂ ಮತ್ತಿತರ ಕಾರಣಗಳಿಂದಾಗಿ ಮಹಾಸಭೆಯ ಕಾರ್ಯಚಟುವಟಿಕೆಗಳು ಹೆಚ್ಚು ಕಡಿಮೆ ಸ್ಥಗಿತಗೊಂಡಂತಹ ವಿಶಿಷ್ಟ ಸನ್ನಿವೇಶದಲ್ಲಿ ಈ ಚುನಾವಣೆ ನಡೆಯಿತು. ಎರಡನೆಯದಾಗಿ ಮೂವರು ಪ್ರಬಲ ಸ್ಪರ್ಧಿಗಳು ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದರಿಂದ ಎಲ್ಲಾ ಸ್ಪರ್ಧಿಗಳು ರಾಜ್ಯಾದ್ಯಂತ ಇರುವ ಸದಸ್ಯರನ್ನು ನೇರವಾಗಿ ಸಂಪರ್ಕಿಸಿ, ಮತ ಯಾಚಿಸಲು ಪ್ರಯತ್ನಿಸಿದ್ದು, ಹಿಂದಿನ ಚುನಾವಣೆಗಿಂತ ವೈಶಿಷ್ಟ್ಯಪೂರ್ಣವಾಗಿತ್ತು. ಇದು ರಾಜ್ಯಾದ್ಯಂತ ಹೊಸ ಸಂಚಲನವನ್ನೇ ಸೃಷ್ಟಿಸಿ, ಸಂಘಟನೆಯ ಬಗ್ಗೆ ಮಾಹಿತಿ ಗೊತ್ತಿರದೇ ಇದ್ದ ಬಹುಜನರಿಗೆ ಮಹಾಸಭೆಯ ಬಗ್ಗೆ ಅರಿವು ಮೂಡಿ, ಸ್ವಯಂಪ್ರೇರಿತವಾಗಿ ಸದಸ್ಯರಾಗಬೇಕೆಂಬ ಅಪೇಕ್ಷೆ ಎಲ್ಲಾ ಕಡೆ ವ್ಯಕ್ತವಾಗಿದ್ದು ಬ್ರಾಹ್ಮಣ ಸಮುದಾಯದ ಸಂಘಟನೆಗೆ ಅತ್ಯಂತ ಪೂರಕ ಬೆಳವಣಿಗೆಯಾಗಿ ಪರಿಣಮಿಸಿತು. ಹೀಗೆ ಚುನಾವಣಾ ಪ್ರಚಾರ ಅಭಿಯಾನ ಸಮುದಾಯ ಸಂಘಟನೆಯ ಜಾಗೃತಿ ಅಭಿಯಾನವಾಗಿ ಹೊರ ಹೊಮ್ಮಿದ್ದರಿಂದ ಈ ಚುನಾವಣೆ ಅತ್ಯಂತ ಮಹತ್ವಪೂರ್ಣವೂ ಆಯಿತು.

**ಸಂಪಾದಕ : ಇದುವರೆವಿಗೆ ಮಹಾಸಭೆಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಮುಂಚೂಣಿಯಲ್ಲಿರದ ತಾವು ಈ ಚುನಾವಣೆಯಲ್ಲಿ ಸ್ಪರ್ಧಿಸಬೇಕಾಗಿ ಬಂದ ಹಿನ್ನೆಲೆ ಏನು?**

ಈ ಹಿಂದಿನ ಅಧ್ಯಕ್ಷರು ನಾನಾ ಕಾರಣಗಳಿಂದಾಗಿ ರಾಜೀನಾಮೆ ನೀಡಿದ್ದರಿಂದ ಹಿರಿಯ ಉಪಾಧ್ಯಕ್ಷನಾಗಿ ನೇಮಕವಾಗಿದ್ದ ನಾನು ನಿಯಮದ ಪ್ರಕಾರ ಹಂಗಾಮಿ ಅಧ್ಯಕ್ಷನಾಗಬೇಕಾಯಿತು. ಇದರಿಂದ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವುದಕ್ಕೆ ಚುನಾವಣೆ ನಡೆಸುವ ಜವಾಬ್ದಾರಿ ನನಗೆ ಬಂತು. ಈ ಸಂದರ್ಭದಲ್ಲಿ ನನಗೆ ಮಹಾಸಭೆಯ ಇಂದಿನ ಸ್ಥಿತಿಗತಿ ಹಾಗೂ ಮಹಾಸಭೆಯು ನಾಲ್ಕು ದಶಕಗಳ ಸುದೀರ್ಘ ಇತಿಹಾಸ ಹೊಂದಿದ್ದರೂ ಇದುವರೆಗಿನ ಸಾಧನೆಯಾಗಲಿ, ಬೆಳವಣಿಗೆಯಾಗಲಿ, ಸಮಾಜದ ಇನ್ನಿತರ ಸಂಘಗಳಿಗೆ ಹೋಲಿಸಿದಾಗ ತುಂಬಾ ಕಡಿಮೆ ಎಂಬ ಭಾವನೆ ಮೂಡಿತು. ಚುನಾವಣೆ ಪ್ರಕ್ರಿಯೆ ಬಗ್ಗೆ ಬೈಲಾವನ್ನು ಅವಲೋಕಿಸಿದಾಗ ಅದರಲ್ಲಿ ಬಹಳ ನ್ಯೂನತೆಗಳು ಕಂಡುಬಂದವು. ಈ ಸಂದರ್ಭದಲ್ಲಿ ಮಹಾಸಭೆಯ ಮುಂಚೂಣಿಯಲ್ಲಿದ್ದ ನನ್ನ ಹಿತೈಷಿಗಳು, ಈ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದು ಒತ್ತಾಯಿಸಿದರು. ಬೈಲಾದಲ್ಲಿ ಆಗಬೇಕಾದ ತಿದ್ದುಪಡಿ, ಸಂಘಟನೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಸಂಘಟನೆಯನ್ನು ರಾಜ್ಯವ್ಯಾಪಿ ವಿಸ್ತರಿಸಿ, ಹೊಸರೂಪದೊಂದಿಗೆ ಬಲಗೊಳಿಸುವ ಸದಾಶಯದಿಂದ ನಾನು ಈ ಚುನಾವಣೆಯಲ್ಲಿ ಸ್ಪರ್ಧಿಸಿದೆ. ಚುನಾವಣೆಯ ಮತಯಾಚನೆಗಾಗಿ ರಾಜ್ಯಾದ್ಯಂತ ನಡೆಸಿದ ಪ್ರವಾಸದಲ್ಲಿ ಸಮಾಜದ ಅನೇಕ ಗುರುವರ್ಯರು, ಮಹಾತ್ಮರು, ಹಿರಿಯರು, ಪ್ರಮುಖರು, ಯುವಕರು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಭೇಟಿಯಾಗುವ ಸದಾವಕಾಶ ಒದಗಿಬಂತು. ಇವರೆಲ್ಲರ ಆಶೀರ್ವಾದ, ಬೆಂಬಲ, ಸಹಕಾರದಿಂದ ನಾನು ಅಧ್ಯಕ್ಷನಾಗಿ ಚುನಾಯಿತನಾಗಿದ್ದು, ಈ ಸಂದರ್ಭದಲ್ಲಿ ಇವರೆಲ್ಲರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ, ಸಂಘಟನೆಯ ಅಭಿವೃದ್ಧಿಗೆ, ಮುಂದಿನ ನನ್ನ ಎಲ್ಲ ಕಾರ್ಯ ಯೋಜನೆಗೆ ಬೆಂಬಲವನ್ನು ಕೋರುತ್ತೇನೆ.

**ಸಂಪಾದಕ : ತಾವು ಅಧ್ಯಕ್ಷರಾಗಿರುವ ಸಂದರ್ಭದಲ್ಲಿ ತಮ್ಮೆದುರಿಗಿರುವ ಸವಾಲುಗಳು ಯಾವುವು? ಸಭೆಯ ಸರ್ವತೋಮುಖ ಬೆಳವಣಿಗೆಗೆ ತಾವು ಹಮ್ಮಿಕೊಂಡಿರುವ ಯೋಜನೆಗಳೇನು?**

**ಅಶೋಕ ಹಾರನಹಳ್ಳಿ :** ಮಹಾಸಭೆಯ ಸರ್ವತೋಮುಖ ಬೆಳವಣಿಗೆಗೆ ಅನುಕೂಲವಾಗುವಂತೆ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದೇವೆ. ವಿಶೇಷವಾಗಿ ಉತ್ತರ ಕರ್ನಾಟಕ ಭಾಗ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಪ್ರದೇಶಗಳಿಗೆ ಕಾರ್ಯಕಾರಿಣಿಯಲ್ಲಿ ಹೆಚ್ಚಿನ ಪ್ರಾತಿನಿಧ್ಯ ನೀಡುವ ಮೂಲಕ ಹೊಸ ಕಾರ್ಯಕಾರಿ ಸಮಿತಿ ಹಾಗೂ ಪದಾಧಿಕಾರಿಗಳನ್ನು ಅಯ್ಕೆ ಮಾಡಿ, ಸಂಘಟನೆಯನ್ನು ವಿಸ್ತರಿಸಿ ಬಲಗೊಳಿಸುವ ಯೋಜನೆಗೆ ಚಾಲನೆ ನೀಡಲಾಗಿದೆ. ಆ ಭಾಗದ ಪ್ರಮುಖರನ್ನು ಉಪಾಧ್ಯಕ್ಷರನ್ನಾಗಿ, ಸಹ ಕಾರ್ಯದರ್ಶಿಗಳನ್ನಾಗಿ ಮಾಡಿದ್ದೇವೆ.

ಇಂದಿನ ವಿದ್ಯುನ್ಮಾನ ಯುಗದಲ್ಲಿ ಸಮುದಾಯದ ಸರ್ವರನ್ನೂ ಸಂಪರ್ಕಿಸಲು ಹಾಗೂ ಬೇಗನೆ ಮಾಹಿತಿ ತಲುಪಿಸಲು ಮಹಾಸಭೆಯ ವೆಬ್‌ಸೈಟ್‌ನ್ನು ಹೊಸದಾಗಿ ರೂಪಿಸಿದ್ದೇವೆ. ಇದರ ಮೂಲಕವೇ ಎಲ್ಲ ಚಟುವಟಿಕೆ ಹಾಗೂ ಸದಸ್ಯತ್ವ ಅಭಿಯಾನಕ್ಕೆ ವೇಗ ಸಿಗಲಿದೆ.

ಈಗಾಗಲೇ ಸಾವಿರಾರು ಆಸಕ್ತರು ವೆಬ್‌ಸೈಟನ್ನು ಸಂಪರ್ಕಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಸದಸ್ಯತ್ವ ನೋಂದಾವಣೆಯೂ ಹೆಚ್ಚಿನ ಸಂಖ್ಯೆಯಲ್ಲಿ ಆಗುತ್ತಿದೆ. ನಮ್ಮ ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ಕಲ್ಪಿಸಲು ಪ್ರತ್ಯೇಕ ವೆಬ್‌ಸೈಟ್ ಸದ್ಯದಲ್ಲೇ ಬರಲಿದೆ.

ಕೋವಿಡ್ ಪಿಡುಗಿನಿಂದ ಕೆಲಸ ಕಳೆದುಕೊಂಡವರಿಗೆ, ಸಂಕಷ್ಟದಲ್ಲಿರುವ ಬಡ ಕುಟುಂಬ, ಪುರೋಹಿತ ವರ್ಗ ಹಾಗೂ ಅಡುಗೆ ವೃತ್ತಿಯವರಿಗೆ ಆರ್ಥಿಕ ನೆರವು ನೀಡಲು ಮತ್ತು ಪರಸ್ಪರ ಮಾಹಿತಿ ವಿನಿಮಯಕ್ಕೆ ವೆಬ್‌ಸೈಟ್‌ನಲ್ಲಿ ವ್ಯವಸ್ಥೆ ಕಲ್ಪಿಸಲಾಗುವುದು. ಮಹಾಸಭೆಯ ಅಂಗಸಂಸ್ಥೆಯಾದ ಸಪ್ತರ್ಷಿ ಫೌಂಡೇಷನ್ನಿನ ಮಹಿಳಾ ವಿದ್ಯಾರ್ಥಿನಿಲಯದ ಆವರಣದಲ್ಲಿ ಖಾಲಿಯಿರುವ ಜಾಗದಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಮಹಾಸಭೆಯ ಈಗಿನ ಕಟ್ಟಡ ಗಾಯತ್ರಿ ಭವನದಲ್ಲಿ ಹೊಸದಾಗಿ ಲಿಫ್ಟ್ ಅಳವಡಿಕೆ ಮುಂತಾದ ಹೆಚ್ಚಿನ ಮೂಲ ಸೌಲಭ್ಯವನ್ನು ಕಲ್ಪಿಸಿ ನವೀಕರಣಗೊಳಿಸುವ ಕಾರ್ಯ ಆರಂಭವಾಗಿದ್ದು, ಕೆಲಸ ಪ್ರಗತಿಯಲ್ಲಿದೆ.

**ಸಂಪಾದಕ : ನಿಮ್ಮ ಈ ಯೋಜನೆಗಳಿಗೆ ಸಂಪನ್ಮೂಲ ಕ್ರೋಢೀಕರಣದ ಬಗೆ ಹೇಗೆ ?**

ಇತ್ತೀಚೆಗೆ ನಡೆದ ಪ್ರಥಮ ಕಾರ್ಯಕಾರಿಣಿ ಸಭೆಯಲ್ಲಿ ನೂತನವಾಗಿ ನೇಮಕವಾಗಿರುವ ಕಾರ್ಯಕಾರಿ ಸಮಿತಿಯ ಸದಸ್ಯರು ಅತ್ಯಂತ ಉತ್ಸಾಹದಿಂದ ವಿಪ್ರ ಶ್ರೇಯೋಭಿವೃದ್ಧಿಗಾಗಿ ರೂ.25 ಲಕ್ಷಕ್ಕೂ ಹೆಚ್ಚು ದೇಣಿಗೆಯನ್ನು ನೀಡುವ ಘೋಷಣೆ ಮಾಡಿರುವುದು ಸಂತೋಷದ ಸಂಗತಿ. ಹೀಗೆಯೇ ಅನೇಕ ಸಂಘ–ಸಂಸ್ಥೆಗಳು, ಸದಸ್ಯರು ನೆರವು ನೀಡುವ ಆಶ್ವಾಸನೆಯನ್ನು ನೀಡಿರುವುದು ಸ್ವಾಗತಾರ್ಹ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ದೇಣಿಗೆಗಳು ಹರಿದು ಬರುವ ನಿರೀಕ್ಷೆಯಿದೆ. ದೇಣಿಗೆ ಸಂಗ್ರಹಕ್ಕಾಗಿ ದಾನಿಗಳನ್ನು ಗುರುತಿಸಿ, ಯಾದಿಯನ್ನು ಸಿದ್ಧಪಡಿಸಲಾಗುವುದು. ಈ ಮಾಹಿತಿಯನ್ನು ವೆಬ್‌ಸೈಟ್ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

**ಸಂಪಾದಕ : ಸಂಘಟನೆಯನ್ನು ಬಲಗೊಳಿಸುವುದು ಹಾಗೂ ಹೊಸ ರೂಪ ಕೊಡುವಲ್ಲಿ ಸಮಾಜದ ಮಹಿಳೆಯರ ಹಾಗೂ ಯುವಕರ ಪಾತ್ರವೇನು?**

**ಅಧ್ಯಕ್ಷರು :** ಯಾವುದೇ ಸಂಘಟನೆಯಲ್ಲಿ ಸಮುದಾಯದ ಯುವ ಜನತೆ, ಮಹಿಳೆಯರು ಮುಖ್ಯವಾದ ಅಂಗ. ಇವರನ್ನು ಸಂಘಟಿಸಲು, ಅವರು ಮಹಾಸಭೆಯ ಕಾರ್ಯಕ್ರಮಗಳಲ್ಲಿ ಪ್ರವೃತ್ತರಾಗಲು ರಾಜ್ಯಮಟ್ಟದಲ್ಲಿ ಮಹಿಳೆಯರು ಮತ್ತು ಯುವಕರಿಗಾಗಿ ಪ್ರತ್ಯೇಕ ಸಂಘಟನೆಗಳನ್ನು ಸ್ಥಾಪಿಸಲಾಗುವುದು.

ಹಾಗೆಯೇ ಸಮಾಜದ ಹಲವು ರಂಗಗಳಲ್ಲಿ ಕೆಲಸ ಮಾಡುತ್ತಿರುವ ವಿಪ್ರ ಕೈಗಾರಿಕೋದ್ಯಮಿಗಳು, ವಕೀಲರು, ವೈದ್ಯರು, ಲೆಕ್ಕಪರಿಶೋಧಕರು, ಭೂ ಅಭಿವೃದ್ಧಿ–ಕಟ್ಟಡ ನಿರ್ಮಾಣಗಾರರು ಮುಂತಾದವರ ಪ್ರತ್ಯೇಕ ವೇದಿಕೆಗಳನ್ನು ಹಂತ ಹಂತವಾಗಿ ರಚಿಸಲಾಗುವುದು. ಈ ಕಾರ್ಯಕ್ಕೆ ನವೀಕೃತ ವೆಬ್‌ಸೈಟ್‌ನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ವ್ಯವಸ್ಥೆ ಮಾಡಿದೆ.

ಸಮಾಜದ ಕೌಟುಂಬಿಕ, ವೈವಾಹಿಕ ಮತ್ತಿತರ ಕಾನೂನು ವಿವಾದಗಳನ್ನು ಪರಿಹರಿಸುವುದು ಮತ್ತು ಕಾನೂನಿನ ನೆರವು ನೀಡಲು ತಜ್ಞ ವಕೀಲರು, ಸಂಧಾನಕಾರರು, ಆಪ್ತ ಸಮಾಲೋಚನಾಕಾರರನ್ನೊಳಗೊಂಡ "ವಿವಾದ ಪರಿಹಾರ ವೇದಿಕೆ ಮತ್ತು ಕಾನೂನು ನೆರವು ವೇದಿಕೆ" ರಚಿಸಲಾಗುವುದು.

ಯೂರೋಪ್–ಅಮೆರಿಕಾ ಸೇರಿದಂತೆ ವಿದೇಶಗಳಲ್ಲಿ ನೆಲೆಸಿರುವ ಕರ್ನಾಟಕ ಮೂಲದ ಬ್ರಾಹ್ಮಣರನ್ನು ಗುರುತಿಸಿ, ಸಂಪರ್ಕಿಸಿ ಸದಸ್ಯರನ್ನಾಗಿಸಿ, ಮಹಾಸಭೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ಯೋಜಿಸಲಾಗಿದೆ. ಇದರಿಂದ ಮಹಾಸಭೆಗೆ ಆರ್ಥಿಕ ಲಾಭವೂ ಲಭಿಸಲಿದೆ. ಇದಕ್ಕಾಗಿ ವಿಪ್ರನುಡಿಯನ್ನು ಡಾ॥ ಸತ್ಯೇಶ್ ಬೆಳ್ಳೂರು ಇವರ ನೇತೃತ್ವದಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೂ ಪ್ರಕಟಿಸಲು ತೀರ್ಮಾನಿಸಲಾಗಿದೆ.

**ಸಂಪಾದಕ: ಮಹಾಸಭೆಯ ಬೈಲಾ ತಿದ್ದುಪಡಿ ಆಗಬೇಕೆಂಬ ಜನಾಭಿಪ್ರಾಯದ ಬಗ್ಗೆ ತಮ್ಮ ನಿಲುವೇನು?**

**ಅಧ್ಯಕ್ಷರು:** ನಾನು ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಲು ಈ ಬೈಲಾ ತಿದ್ದುಪಡಿಯು ಪ್ರಮುಖ ಕಾರಣವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಸಂದರ್ಭದಲ್ಲಿ ರಾಜ್ಯವ್ಯಾಪಿ ಸಂಚಾರ ಕೈಗೊಂಡಾಗ ಹಲವು ಜಿಲ್ಲೆಗಳ ಬಹಳಷ್ಟು ವಿಪ್ರ ಪ್ರಮುಖರು ಬೈಲಾ ತಿದ್ದುಪಡಿಗಾಗಿ ಆಗ್ರಹಿಸಿದ್ದಾರೆ. ಪ್ರಚಲಿತ ವಿದ್ಯಮಾನಕ್ಕೆ ತಕ್ಕಂತೆ ಹಲವು ನೂತನ ವಿಷಯಗಳನ್ನು ಸೇರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇವೆಲ್ಲವನ್ನು ಪರಿಗಣಿಸಿ ಹೊಸ ಕಾರ್ಯಕಾರಿ ಸಮಿತಿಯ ಮೊದಲ ಸಭೆಯಲ್ಲಿಯೇ ಈ ವಿಷಯ ಚರ್ಚಿಸಿ, ಸದಸ್ಯರು ಈ ಸಂಬಂಧ ಅಧ್ಯಕ್ಷರಿಗೆ ಸಂಪೂರ್ಣ ಅಧಿಕಾರ ನೀಡಿದ್ದಾರೆ. ಸದ್ಯದಲ್ಲಿಯೇ ಇದಕ್ಕಾಗಿ ಒಂದು ಸಮಿತಿ ರಚಿಸಿ ಅದರ ಅಭಿಪ್ರಾಯ ಪಡೆದು ಮುಂದುವರೆಯಲಿದ್ದೇವೆ.

**ಸಂಪಾದಕ : ಬೆಂಗಳೂರು ಹಾಗೂ ಹಳೆ ಮೈಸೂರು ಕೇಂದ್ರೀಕೃತವಾದ ಸಂಘಟನೆಯನ್ನು ರಾಜ್ಯಾದ್ಯಂತ ವಿಸ್ತರಿಸಲು ಕಾರ್ಯಯೋಜನೆಗಳೇನು?**

ನವೀಕೃತ ವೆಬ್‌ಸೈಟ್ ಈ ದಿಶೆಯಲ್ಲಿ ಸಹಾಯ ಮಾಡಲಿದೆ. ಸಂಘಟನೆ ಹೆಚ್ಚು ಕ್ರಿಯಾಶೀಲವಾಗಲು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉತ್ತರ ಕರ್ನಾಟಕ ಭಾಗದ ಮುಖಂಡರನ್ನೊಳಗೊಂಡ ಕಾರ್ಯಕಾರಿ ಸಮಿತಿ ರಚನೆ ಆಗಿದೆ. ತಾಲ್ಲೂಕು ಬ್ರಾಹ್ಮಣ ಸಂಘಗಳ ಸಹಕಾರದೊಂದಿಗೆ, ಹೊಸ ಸದಸ್ಯರ ನೋಂದಣಿ, ಕಾರ್ಯವನ್ನು ಹಮ್ಮಿಕೊಳ್ಳುತ್ತೇವೆ. ಈ ದಿಶೆಯಲ್ಲಿ ಅತ್ಯಂತ ವಿಸ್ತೃತವಾದ ಉಪಸಮಿತಿಗಳು ರಚನೆಯಾಗಲಿವೆ. ರಾಜ್ಯದ ಪ್ರಮುಖ ಜಿಲ್ಲೆಗಳ ಬ್ರಾಹ್ಮಣ ಮುಖಂಡರ ಸಭೆಗಳನ್ನು ಆಯಾಯಾ ಭಾಗದಲ್ಲೇ ಕರೆದು, ಅವರೊಂದಿಗೆ ಚರ್ಚಿಸಿ, ಕಾರ್ಯಕ್ರಮಗಳ ರೂಪುರೇಷೆಗಳನ್ನು

ಸಿದ್ಧಪಡಿಸಲಾಗುವುದು. ಆದ್ದರಿಂದ ಮಹಾಸಭೆಯಲ್ಲಿ ನೋಂದಣಿ ಹೊಂದಿದ ಸಂಘ–ಸಂಸ್ಥೆಗಳು ಮುಂಬರುವ ತಿಂಗಳುಗಳಲ್ಲಿ ಮಹತ್ತರ ಪಾತ್ರ ವಹಿಸಲಿವೆ.

**ಸಂಪಾದಕ : ಮಹಾಸಭೆಯ ಮೂಲೋದ್ದೇಶಗಳಾದ ಸಂಘಟನೆ, ಸ್ವಾವಲಂಬನೆ, ಸಂಸ್ಕಾರಗಳನ್ನು ಬಲಪಡಿಸುವ ಬಗ್ಗೆ ತಮ್ಮ ಚಿಂತನೆಗಳೇನು?**

**ಅಧ್ಯಕ್ಷರು :** ಈಗಾಗಲೇ ಸಭೆಯ ಸಂಘಟನೆ, ಸ್ವಾವಲಂಬನೆ ಬಗ್ಗೆ ಪ್ರಸ್ತಾಪಿಸಿದ್ದಾಗಿದೆ. ಬ್ರಾಹ್ಮಣ ಯುವಕರು, ವೇದಾಧ್ಯಯನ, ಸಂಧ್ಯಾ ವಂದನೆ ಇನ್ನಿತರ ಆಚರಣೆಗಳ ಕ್ರಮಗಳು, ಶಾಸ್ತ್ರಗಳ ಪರಿಚಯ ಹೊಂದಲು ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದ್ದೇವೆ. ಮುಂದೆ ಈ ಸಂಬಂಧ ಹಲವಾರು ಪ್ರವಚನಗಳನ್ನು ಏರ್ಪಡಿಸಿ, ಮಾಹಿತಿಯನ್ನು ವೆಬ್‌ಸೈಟ್, ಆನ್‌ಲೈನ್ ಮೂಲಕ ತಲುಪಿಸಲಿದ್ದೇವೆ. ಉಪಯುಕ್ತ ಪುಸ್ತಕ ಪ್ರಕಟಣೆಯನ್ನು ಮಾಡಲಿದ್ದೇವೆ.

**ಸಂಪಾದಕ : ಈ ಎಲ್ಲ ಯೋಜನೆಗಳ ಅನುಷ್ಠಾನದಲ್ಲಿ ವಿಪ್ರನುಡಿಯ ಪಾತ್ರವೇನು?**

**ಅಧ್ಯಕ್ಷರು :** ಮಹಾಸಭೆಯ ಮೂಲ ಆಶಯ, ಅಭಿವೃದ್ಧಿ ಎಲ್ಲಾ ಕಾರ್ಯಚಟುವಟಿಕೆಗಳನ್ನು ಪ್ರತಿಬಿಂಬಿಸುವಂತೆ ವಿಪ್ರನುಡಿಯನ್ನು ಹೊಸ ವಿನ್ಯಾಸದೊಂದಿಗೆ ಪ್ರಕಟಿಸುವುದಕ್ಕಾಗಿ ಸಮಾಜದ ಪ್ರತಿಭಾವಂತ ವಿದ್ವಾಂಸರು ಮತ್ತು ಅನುಭವಿ ಪತ್ರಕರ್ತರು, ಮುದ್ರಕರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿದೆ. ಹಾಗೆಯೇ ಪತ್ರಿಕೆ ಮುದ್ರಣ ವೆಚ್ಚ ದುಬಾರಿಯಾಗಿರುವ ಹಿನ್ನೆಲೆಯಲ್ಲಿ ಎಲ್ಲರಿಗೂ ಮುದ್ರಿತ ಪ್ರತಿಯನ್ನು ಕಳುಹಿಸುವ ಬದಲು ಇ–ಪತ್ರಿಕೆಯ ಮೂಲಕ ವೆಬ್‌ಸೈಟ್‌ನಲ್ಲಿ ಎಲ್ಲರಿಗೂ ಲಭ್ಯವಾಗುವಂತೆ ವ್ಯವಸ್ಥೆ ಮಾಡಿದೆ. ಸಮಾಜದ ಮಠಗಳಿಗೆ, ನೋಂದಾಯಿತ ಸಂಘ ಸಂಸ್ಥೆಗಳಿಗೆ, ಈಗಿನ ಮತ್ತು ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪದಾಧಿಕಾರಿಗಳಿಗೆ ವಿಪ್ರನುಡಿಯ ಮುದ್ರಿತ ಪ್ರತಿ ದೊರೆಯಲಿದೆ.

**ಸಂಪಾದಕ :** ಅಧ್ಯಕ್ಷರೇ, ಬಿಡುವಿಲ್ಲದ ಕಾರ್ಯಕ್ರಮದ ನಡುವೆ ನಮಗೆ ಸಮಯನೀಡಿ ನಿಮ್ಮ ಯೋಚನೆ–ಯೋಜನೆಗಳನ್ನು ಹಂಚಿಕೊಂಡಿದ್ದಕ್ಕಾಗಿ ಧನ್ಯವಾದಗಳು. ನಿಮ್ಮೆಲ್ಲ ಯೋಜನೆಗಳು ಶೀಘ್ರವಾಗಿ ಸಹಕಾರಗೊಳ್ಳಲೆಂದು ಹಾರೈಸುತ್ತೇವೆ.

## ಬ್ರಾಹ್ಮಣ ಬಂಧುಗಳು, ಲೇಖಕರು, ನೊಂದಾಯಿತ ಸಂಘ–ಸಂಸ್ಥೆಗಳ ಪದಾಧಿಕಾರಿಗಳಿಗೆ ಸೂಚನೆಗಳು:

**ನೂತನ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರ ಮಾರ್ಗದರ್ಶನದಲ್ಲಿ 'ವಿಪ್ರನುಡಿ' ಮಾಸಿಕ ಸಂಚಿಕೆ ಪ್ರಕಟವಾಗುತ್ತಿದೆ. ಅನಾವಶ್ಯಕ ಖರ್ಚು–ವೆಚ್ಚವನ್ನು ತಗ್ಗಿಸಲು ಅವರು ಕೆಲವು ಸೂಚನೆಗಳನ್ನು ಹೊಸ ಸಂಪಾದಕ ಮಂಡಳಿಗೆ ನೀಡಿದ್ದಾರೆ. ಅದರಂತೆ ಸಂಪಾದಕ ಮಂಡಲಿಯು ಚರ್ಚಿಸಿ ಈ ಕೆಳಕಂಡ ಮಾಹಿತಿಯನ್ನು ತಮಗೆ ನೀಡುತ್ತಿದೆ.**

1) ಮಹಾಸಭೆಗೆ 500ಕ್ಕೂ ಹೆಚ್ಚು ನೊಂದಾಯಿತ ಸಂಘ–ಸಂಸ್ಥೆಗಳು ಇದ್ದು, ಅವು ಪ್ರತಿ ತಿಂಗಳೂ ಹಲವಾರು ಕಾರ್ಯಕ್ರಮಗಳನ್ನು ಸಮರ್ಥವಾಗಿ, ಯಶಸ್ವಿಯಾಗಿ ನಡೆಸುತ್ತಿವೆ. ಅ ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮದ ವರದಿಯನ್ನು ಛಾಯಾಚಿತ್ರಗಳೊಂದಿಗೆ ಪ್ರಕಟನೆಗೆ ಕಳುಹಿಸುತ್ತಿದ್ದಾರೆ. ಸಾಮಾನ್ಯವಾಗಿ ಈ ವರದಿಗಳು ಹಲವಾರು ಪುಟಗಳಿದ್ದು, ಕೆಲವು ಛಾಯಾಚಿತ್ರಗಳನ್ನು, ಭಾಗವಹಿಸಿದ ಎಲ್ಲ ಪದಾಧಿಕಾರಿಗಳ ಹೆಸರುಗಳನ್ನು ಒಳಗೊಂಡಿರುತ್ತದೆ. ವಿಪ್ರನುಡಿಯಲ್ಲಿ ಪ್ರಕಟನಾ ಮಾಹಿತಿ ಕೇವಲ 12–16 ಪುಟಗಳಿರುವುದರಿಂದ ಎಲ್ಲವನ್ನೂ ಪ್ರಕಟಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ 100 ಪದಗಳ ವರದಿ ಅಥವ ಹೈ ರೆಸಲ್ಯೂಷನ್ ಇರುವ ಒಂದು ಅಥವಾ ಎರಡು ಚಿತ್ರಗಳನ್ನು ಮಾತ್ರ ಕಳುಹಿಸಬೇಕಾಗಿ ಕೋರಿಕೆ. ಆದಷ್ಟುಮಟ್ಟಿಗೆ ಕೇವಲ ಮುಖ್ಯ ಅತಿಥಿಗಳ, ಸಂಸ್ಥೆಯ ಅಧ್ಯಕ್ಷರು, ಕಾರ್ಯದರ್ಶಿಗಳ ಹೆಸರನ್ನು ಮಾತ್ರ ವರದಿಯಲ್ಲಿ ದಾಖಲಿಸಬೇಕಾಗಿ ವಿನಂತಿ.

2) ನಮ್ಮ ವಿಪ್ರರು ಹಲವಾರು ರಂಗಗಳಲ್ಲಿ ಅದ್ವಿತೀಯ ಸಾಧನೆ ಮಾಡಿ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ಮಹಾಸಭೆಯ ಸದಸ್ಯತ್ವ ಹೊಂದಿದ ವಿಪ್ರರಿಗೆ ಪ್ರಶಸ್ತಿಗಳು ದೊರಕಿದ್ದನ್ನು 'ವಿಪ್ರನುಡಿ'ಯಲ್ಲಿ ಪ್ರಕಟಿಸಬೇಕಾಗುತ್ತದೆ. ಸಂಪಾದಕ ಮಂಡಲಿಯ ನಿರ್ಣಯದಂತೆ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರ, ವಿದೇಶಗಳ, ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದ ವಿಪ್ರರ ಛಾಯಾಚಿತ್ರ, ಮಾಹಿತಿಯನ್ನು ಪ್ರಕಟಿಸಲಾಗುವುದು. ಬೇರೆ ಸಂಸ್ಥೆಗಳು ನೀಡುವ ಪ್ರಶಸ್ತಿ ವಿಜೇತರ ಮಾಹಿತಿಗೆ ನಂತರದ ಅವಕಾಶ ಮಾತ್ರ.

3) ಮಹಾಸಭೆಯ ಮೂಲ ಉದ್ದೇಶಗಳಾದ ಸಂಘಟನೆ, ಸ್ವಾವಲಂಬನೆ, ಸಂಸ್ಕಾರ, ಯುವಕರಿಗೆ ಮಾರ್ಗದರ್ಶನ, ಬ್ರಾಹ್ಮಣರ ಸಮಸ್ಯೆಗಳು, ಹಬ್ಬಗಳ ಬಗ್ಗೆ ಚಿಕ್ಕ–ಚೊಕ್ಕ ಒಂದು ಪುಟ ಮೀರದ ಲೇಖನಗಳಿಗೆ ಪ್ರಾಶಸ್ತ್ಯ ನೀಡಲಾಗುವುದು.

4) **ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.**

**ಲೇಖನ ವರದಿಗಳನ್ನು ಕಳುಹಿಸಬೇಕಾದ ಇ–ಮೇಲ್ : e mail : vipranudi@gmail.com**

–ಸಂಪಾದಕ ಮಂಡಳಿ.

# ಶತಮಾನದ ಸಾಧನೆ
## ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ.)

ಮಲೆನಾಡಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಆಧುನಿಕ ಶಿಕ್ಷಣಕ್ಕೆ ಸಹಕಾರಿಯಾಗುವ ನಿಟ್ಟಿನಲ್ಲಿ ಸ್ಪಷ್ಟ ನಿಲುವಿನೊಂದಿಗೆ 1918 ಮಾರ್ಚ್ 1 ರಂದು ಶ್ರೀ ಶ್ರೀ ಶಿವಗಂಗಾ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಬ್ರಾಹ್ಮಣ ಸಂಘಟನೆ ಶ್ರೀ ಹರಕೆರೆ ರಾಮಪ್ಪನವರ ಸಾರಥ್ಯದಲ್ಲಿ ಪ್ರಾರಂಭ ವಾಯಿತು. ಮಹಾಸಭಾ ತನ್ನ ಉದ್ದೇಶವನ್ನು ಪೂರ್ಣಗೊಳಿಸುತ್ತಾ ಚಿಕ್ಕ ಪ್ರಮಾಣದಲ್ಲಿ ದೇವಸ್ಥಾನ ಮತ್ತು ಇತರೆ ಬಾಡಿಗೆ ಕಟ್ಟಡದಲ್ಲಿ ಇದ್ದು ಕಾಲಕ್ರಮೇಣ 1948ರಲ್ಲಿ ಶ್ರೀ ಹೊಸೂಡಿ ವೆಂಕಟರಾಮ ಶಾಸ್ತ್ರಿಗಳು ಮತ್ತು ಕೆಲವು ಮಹನೀಯರ ಮುಂದಾಲೋಚನೆ ಮತ್ತು ಕಾರ್ಯಕ್ಷಮತೆಯಿಂದಾಗಿ ಬಿ.ಹೆಚ್. ರಸ್ತೆ ಯಲ್ಲಿ 90,000 ಚದರ ಅಡಿ (ಹಾಲಿ ಕಟ್ಟಡ ಇರುವ ಜಾಗ) ನಿವೇಶನ ಖರೀದಿಸಿ, ಅದರ ಸ್ವಲ್ಪ ಭಾಗದಲ್ಲಿ ವಿದ್ಯಾರ್ಥಿನಿಲಯ ನಿರ್ಮಿಸಿ ಉಳಿದ ಭಾಗವನ್ನು ಸಮಾಜದ ಮುಂದಿನ ಯೋಜನೆಗಳಿಗಾಗಿ ಮೀಸಲಾಗಿ ಇಡಲಾಗಿತ್ತು. ಈ ಉದಾತ್ತ ಚಿಂತನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ 1996ರಲ್ಲಿ ಯುವ ಶಕ್ತಿ/ಸಮುದಾಯದ ಪ್ರವೇಶದಿಂದಾಗಿ 2004ರಲ್ಲಿ ಶ್ರೀ ಗಾಯತ್ರಿ ಮಾಂಗಲ್ಯ ಮಂದಿರ ನಿರ್ಮಾಣವಾಯಿತು.

**ಸಮಾಜದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ವಿಪ್ರ ಕುಟುಂಬಗಳಿಗೆ ಪ್ರತಿ ಮಾಹೆ ರೂ.750/= ರಂತೆ 110 ಕುಟುಂಬಗಳಿಗೆ, ಮಾಸಾಶನ ನೀಡಲಾಗುತ್ತಿದೆ. ಸಮಾಜ ಬಂಧುಗಳಿಗೆ ವಿದ್ಯಾಭ್ಯಾಸ, ವೈದ್ಯಕೀಯ ವೆಚ್ಚಕ್ಕೆ ಧನ ಸಹಾಯ ನೀಡುತ್ತಲಿದೆ.** ಧಾರ್ಮಿಕ ಮತ್ತು ಆಧ್ಯಾತ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸುವ ಸಲುವಾಗಿ ವಿವಿಧ ಹೋಮ, ಹವನ ಹಾಗೂ ಸಂಹಿತಾಯಾಗ ನಡೆಸಲಾಗುತ್ತಿದೆ. ಬೆಳೆಯುವ ಮಕ್ಕಳನ್ನು ಸಂಸ್ಕಾರ ಗೊಳಿಸುವ ಉದ್ದೇಶದಿಂದ 10 ವರ್ಷದಿಂದ 16 ವರ್ಷದ ಮಕ್ಕಳಿಗೆ **"ವಸಂತ ವೇದ ಶಿಬಿರ"** ಆಯೋಜಿಸುತ್ತಲಿದೆ. ಜಿಲ್ಲೆಯ ವಿಪ್ರ ಸಂಘಟನೆ ಗಳು ಆಯೋಜಿಸಿಕೊಳ್ಳುವ ಧಾರ್ಮಿಕ, ಸಾಂಸ್ಕೃತಿಕ ಮತ್ತು ಕಟ್ಟಡ ನಿರ್ಮಾಣ ಕಾರ್ಯಗಳಿಗೆ ಧನಸಹಾಯ ಮಾಡುತ್ತಲಿದೆ.

**1-3-2018ಕ್ಕೆ ನೂರು ವಸಂತಗಳನ್ನು ಕಂಡ ಈ ಮಹಾಸಭಾದ ಶತಮಾನೋತ್ಸವವನ್ನು ಒಂದು ವರ್ಷಗಳ ಕಾಲ ವಿವಿಧ ಕಾರ್ಯಕ್ರಮ ಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.** ಸುಮಾರು 127 ಕಾರ್ಯಕ್ರಮಗಳನ್ನು ಚಿಕ್ಕ ಚಿಕ್ಕ ಗ್ರಾಮೀಣ ಪ್ರದೇಶದಲ್ಲಿ ನಡೆಸಿದ್ದು ಒಂದು ವೈಶಿಷ್ಟ್ಯವೇ ಸರಿ. ಇದರಿಂದಾಗಿ ಮಹಾಸಭಾ ಜಿಲ್ಲಾದ್ಯಂತ ಸಾವಿರಾರು ವಿಪ್ರರನ್ನು ತಲುಪಿ ಸಂಘಟನೆಯನ್ನು ಮತ್ತಷ್ಟು ಬಲಗೊಳಿಸಲು ಸಾಧ್ಯವಾಯಿತು.

ಪ್ರಸ್ತುತ ವಿದ್ಯಾರ್ಥಿನಿಲಯದಲ್ಲಿ ವಿವಿಧ ಕೋರ್ಸ್‌ಗಳಲ್ಲಿ ಅಭ್ಯಾಸ ಮಾಡುತ್ತಿರುವ 110 ವಿದ್ಯಾರ್ಥಿಗಳಿದ್ದಾರೆ. ಇದರಲ್ಲಿ ಕೆಲವರಿಗೆ ಅಲ್ಪ, ಅರ್ಧ ಮತ್ತು ಪೂರ್ಣ ವಿನಾಯಿತಿಗಳನ್ನು ಸಹ ಕೊಡಲಾಗಿದೆ.

ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ ಕೈಗೊಂಡ ನಿರ್ಣಯದಂತೆ ಗೋಶಾಲೆಯನ್ನು ಸ್ಥಾಪಿಸಿ, ವಿವಿಧ ಜಾತಿಗಳಿಗೆ ಸೇರಿದ ಹಸುಗಳ, ಮುದಿ ಹಸುಗಳ ಸಂರಕ್ಷಿಸುವ ಕರ್ತವ್ಯವನ್ನು ನಿರ್ವಹಿಸಲಾಗುತ್ತಿದೆ. ಸುಮಾರು 9 ಎಕರೆ ಪ್ರದೇಶದಲ್ಲಿ 2 ಆಧುನಿಕ ವಾದ ಸುಸಜ್ಜಿತ ಶೆಡ್ ನಿರ್ಮಿಸಿ ಹಸುಗಳಿಗೆ ಆಶ್ರಯ ನೀಡಲಾಗಿದೆ. ಗೋಗ್ರಾಸ, ಗೋಪೂಜೆ, ಗೋದಾನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಗೋ ಸಂರಕ್ಷಣಾ ಮಹತ್ಕಾರ್ಯದಲ್ಲಿ ಸಮಾಜದ ಬಂಧುಗಳು ಉದಾರ ಮನೋಭಾವದಿಂದ ವಂತಿಕೆ/ದೇಣಿಗೆ ನೀಡಲು ನಿವೇದಿಸಿಕೊಳ್ಳಲಾಗಿದೆ.

**ನಮ್ಮ ಕಲ್ಯಾಣ ಮಂದಿರದಲ್ಲಿ ನಡೆಯುವ ಪ್ರತಿ ಮದುವೆಯ ಸಂದರ್ಭದಲ್ಲಿ ರೂ.300/= ರಂತೆ ಸಂಗ್ರಹಿಸಿ ಅದನ್ನು ಬ್ರಾಹ್ಮಣ ಅಡಿಗೆ ಸಂಘದವರಿಗೆ ವರ್ಷಕ್ಕೊಮ್ಮೆ ನೀಡುತ್ತಿದ್ದು ಅಡಿಗೆಯವರಿಗೆ ನೆರವು ನೀಡಲಾಗುತ್ತಿದೆ.**

ಕೋಟಿ ಗ್ರಾಯತ್ರಿ ಜಪ ಯಜ್ಞವನ್ನು ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಗಳು ಹಾಗೂ ವಿಪ್ರಬಂಧುಗಳ ಸಹಕಾರದಿಂದ ನಡೆಸಿ, ಮುಂಬರುವ ದಿನಗಳಲ್ಲಿ ಸಾಂಗತಾ ಯಜ್ಞವನ್ನು ನಡೆಸಲಾಗುವುದು.

**ಹೆಣ್ಣುಮಕ್ಕಳ ವಿದ್ಯಾರ್ಥಿನಿ ನಿಲಯ, ವೃದ್ಧಾಶ್ರಮ, ವಿಪ್ರ ಯುವ ವೇದಿಕೆ, ಆರೋಗ್ಯ ಮತ್ತು ಶವಸಂಸ್ಕಾರ ಸಂದರ್ಭದಲ್ಲಿ "ಹೆಲ್ಪ್‌ಲೈನ್" ವ್ಯವಸ್ಥೆ ಮುಂತಾದ ಹಲವು ಹೊಸ ಯೋಜನೆಗಳು ನಮ್ಮ ಮುಂದಿದೆ.**

### ವಿಪ್ರ ಸಹಕಾರಿ ನಿರ್ದೇಶಕರ ಸಮಾವೇಶ

ದಿನಾಂಕ 01.11.2021ರ ಸೋಮವಾರ ಜಿಲ್ಲಾ ಬ್ರಾಹ್ಮಣ ಮಹಾಸಭಾ ವತಿಯಿಂದ ವಿವಿಧ ಸಹಕಾರಿ ಸಂಘಗಳ ಸಹಕಾರದೊಂದಿಗೆ ಜಿಲ್ಲಾ ಸೌಹಾರ್ದ ಸಹಕಾರಿ ವಿಪ್ರ ನಿರ್ದೇಶಕರ ಮತ್ತು ಪ್ರಮುಖರ ಸಮಾವೇಶವನ್ನು ಗಾಯತ್ರಿ ಮಾಂಗಲ್ಯ ಮಂದಿರದಲ್ಲಿ ನಡೆಸಲಾಯಿತು. ಮಾಜಿ ಅಡ್ವೋಕೇಟ್ ಜನರಲ್ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಂಗಾಮಿ ಅಧ್ಯಕ್ಷರಾಗಿದ್ದ ಶ್ರೀ ಅಶೋಕ ಹಾರನಹಳ್ಳಿಯವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸುಮಾರು 400ಕ್ಕೂ ಹೆಚ್ಚು ವಿಪ್ರ ಸಹಕಾರಿ ನಿರ್ದೇಶಕರು ಮತ್ತು ಪ್ರಮುಖರು ಭಾಗವಹಿಸಿದ್ದರು. ಗೀತಾ ಜಯಂತಿ ಹಾಗೂ ದೀಪಾವಳಿಯಂದು ಗೋಪೂಜೆಯನ್ನು ಸಾಂಪ್ರದಾಯಕವಾಗಿ ಸಂಭ್ರಮದಿಂದ ಆಚರಿಸಲಾಯಿತು.

**ದಿನಾಂಕ 27.12.2021ರಂದು ನಡೆದ ಚುನಾಯಿತ ಮತ್ತು ನಿರ್ಗಮಿತ ನಿರ್ದೇಶಕ ಮಂಡಳಿಯ ಸಭೆಯಲ್ಲಿ ನೂತನ ಆಡಳಿತ ಮಂಡಳಿಯ ಪದಾಧಿಕಾರಿಗಳು ಆಯ್ಕೆಯಾದರು.**

**1. ಅಧ್ಯಕ್ಷರಾಗಿ .. ಶ್ರೀ ಕೆ.ಸಿ. ನಟರಾಜ ಭಾಗವತ್**
**2. ಉಪಾಧ್ಯಕ್ಷರಾಗಿ .. ಶ್ರೀ ಶಶಿಧರ**
**3. ಕಾರ್ಯದರ್ಶಿಯಾಗಿ .. ಶ್ರೀ ಬಿ.ಕೆ. ವೆಂಕಟೇಶಮೂರ್ತಿ**
**4. ಸಹ ಕಾರ್ಯದರ್ಶಿಯಾಗಿ .. ಶ್ರೀಮತಿ ಡಾ|| ನಾಗಮಣಿ**
**5. ಖಜಾಂಚಿಯಾಗಿ .. ಶ್ರೀ ಕೆ.ಜಿ. ಸತ್ಯನಾಥ**

**ಇವರುಗಳು ಅವಿರೋಧವಾಗಿ ಅಯ್ಕೆಯಾದರು. ಅಂದೇ ಅಧಿಕಾರ ಪದಗ್ರಹಣ ಕಾರ್ಯಕ್ರಮ ಔಪಚಾರಿಕವಾಗಿ ನಡೆಯಿತು.**

# ಬ್ರಾಹ್ಮಣ-ವಿರೋಧದ ಹಿಂದಿರುವ ಸೂತ್ರಧಾರರು ಯಾರು?

-ಜಿ. ಅನಿಲ್‌ಕುಮಾರ್, ಸಂಪಾದಕರು, ಕರ್ಮವೀರ

**ಪ್ರಸ್ತುತ ಭಾರತದಲ್ಲಿ ಯಾರು ಬೇಕಾದರೂ ಬ್ರಾಹ್ಮಣರನ್ನು ಬಹಿರಂಗವಾಗಿ ನಿಂದಿಸಬಹುದು ಎನ್ನುವಂತಾಗಿದೆ. ಯೂರೋಪಿನ ಮಿಷನರಿ, ಬಿಷಪ್ ರಾಬರ್ಟ್ ಕಾಲ್ಡ್‌ವೆಲ್ ಭಾರತದಲ್ಲಿ ಒಡಕು ಮೂಡಿಸಲು ಸೃಷ್ಟಿಸಿದ 'ಬ್ರಾಹ್ಮಣ ವಿರೋಧಿ' ವೈಚಾರಿಕತೆಯನ್ನು, ಸ್ವಘೋಷಿತ ಇಂಡಾಲಜಿಸ್ಟ್‌ಗಳು ಸೃಷ್ಟಿಸಿದ 'ಆರ್ಯ-ದ್ರಾವಿಡ' ಭೇದವನ್ನು, ರಾಜಕೀಯ ಅಸ್ತ್ರದ ರೀತಿಯಲ್ಲಿ ಬೆಳೆಸಿದ ಪರಿಣಾಮವಾಗಿ 'ಬ್ರಾಹ್ಮಣ ನಿಂದನೆಯೇ ಪ್ರಗತಿಪರತೆಯ ಲಕ್ಷಣ' ಎಂಬಂತಾಗಿದೆ. ಹಾಗೆಯೇ ಬುದ್ಧಿಜೀವಿಗಳು ಚಿತ್ರಿಸಿ, ಚಿತ್ರಿಸಿ ಅದನ್ನೇ ಒತ್ತಿಬಿಟ್ಟಿದ್ದಾರೆ. "ಬ್ರಾಹ್ಮಣ್ಯ" "ಬ್ರಾಹ್ಮಿನಿಸಂ", "ಬ್ರಾಹ್ಮಣಿಕೆ", "ಮಡಿವಂತಿಕೆ" ಇವುಗಳನ್ನೆಲ್ಲ ವ್ಯವಸ್ಥಿತವಾಗಿ ನಿಂದನಾತ್ಮಕ ಬೈಗುಳಗಳನ್ನಾಗಿ ಮಾರ್ಪಡಿಸಲಾಗಿದೆ.**

ವರ್ಣಗಳು ವ್ಯಕ್ತಿಯ ಸ್ವಭಾವ ಹಾಗೂ ಕರ್ಮದ ಅಯ್ಕೆಯನ್ನು ಅನುಸರಿಸಿದ್ದವು. ಅವುಗಳನ್ನು ಬದಲಿಸಿ ಕೊಳ್ಳಬಹುದಾಗಿತ್ತು. ವೇದ ಮಂತ್ರಗಳನ್ನು ಪರಿಚಯಿಸಿರುವ ಅನೇಕ ಋಷಿಗಳು ಹುಟ್ಟಿನ, ಸಮುದಾಯದ ಅರ್ಥದಲ್ಲಿ ಬ್ರಾಹ್ಮಣರಲ್ಲ. ಬ್ರಹ್ಮಜ್ಞಾನದ ದೃಷ್ಟಿಯಿಂದ ಬ್ರಾಹ್ಮಣರು. ಆರ್ಥಿಕ ದೃಷ್ಟಿಯಿಂದ ನೋಡಿದಾಗ, ಭಾರತದಲ್ಲಿ "ಜಾತಿ" ಎಂಬುದನ್ನು ವಿವಿಧ ಕಸುಬುಗಳನ್ನು ಮಾಡುವ ಸಮುದಾಯಗಳ ರೂಪದಲ್ಲಿ ಪರಿಗಣಿಸಲಾಗಿತ್ತು. ಕೆಲವೊಮ್ಮೆ ಸಮುದಾಯಗಳ ಕುಲಕಸುಬುಗಳು ಬದಲಾಗುತ್ತಿದ್ದುದೂ ಉಂಟು. ಭಾರತದಲ್ಲಿ ಮೊದಲ ಬಾರಿಗೆ ಜಾತಿವಾರು ವಿಂಗಡನೆ ಹಾಗೂ ವರ್ಗೀಕರಣ ಮಾಡಿದ್ದು, ಹೊಸ ಮಾದರಿಯ "ಕ್ಯಾಸ್ಟ್-ಸಿಸ್ಟೆಮ್" ಅನ್ನು ಸೃಷ್ಟಿಸಿದ್ದು ಬ್ರಿಟಿಷರು. ಭಾರತದಲ್ಲಿ ಸಂಸ್ಕೃತ ಕಲಿಕೆ ನಡೆಯುತ್ತಿದ್ದಷ್ಟು ಕಾಲ ಭಾರತದೇಶ ಜಗತ್ತಿನ ಬೌದ್ಧಿಕ ನಾಯಕನಾಗಿತ್ತು. ಇಂತಹ ಸಂಸ್ಕೃತವನ್ನು ಅಳಿಸಿ ಇಂಗ್ಲಿಷ್ ಶಿಕ್ಷಣದ ಏಕಭಾಷಾ ಸೂತ್ರವನ್ನು ಜಾರಿಗೆ ತಂದಿದ್ದು ಥಾಮಸ್ ಮೆಕಾಲೆ ಎಂಬುದು ಸರ್ವವಿದಿತ.

ಮುಘಲರ ಕಾಲದಲ್ಲಿ ಬ್ರಾಹ್ಮಣ-ದ್ವೇಷ ತೀವ್ರವಾಗಿತ್ತು. 'ಇಷ್ಟು ಬ್ರಾಹ್ಮಣರನ್ನು ಕೊಂದೆವು' ಎಂದು ಘೋಷಿಸಿಕೊಳ್ಳುವುದು ಹೆಮ್ಮೆಯ ಸಂಗತಿಯಾಗಿತ್ತು. ಟಿಪ್ಪು ಸುಲ್ತಾನ್ ಕಾಲದಲ್ಲಿ ಹಳೇ ಮೈಸೂರು ರಾಜ್ಯದಲ್ಲಿ 'ಬೊಮ್ಮನ್' ಎಂಬುದು ನಿಂದನಾತ್ಮಕ ಪದವಾಗಿ ಬಳಕೆಗೆ ಬಂದಿತು. ಆದರೆ ಅದನ್ನೇ ಒಂದು 'ಸೊಫಿಸ್ಟಿಕೇಟೆಡ್ ಥಿಯರಿ'ಯ ಮಟ್ಟಕ್ಕೆ ತೆಗೆದುಕೊಂಡುಹೋಗಿ ರಾಜಕೀಯ ಚಳವಳಿಯ ಆಯಾಮ ನೀಡಿದವನು, 19ನೇ ಶತಮಾನದ ಐರೋಪ್ಯ ಮಿಷನರಿ ರಾಬರ್ಟ್ ಕಾಲ್ಡ್‌ವೆಲ್. ಆತ ಹುಟ್ಟುಹಾಕಿದ ವಿಭಜನಕಾರಿ ಸಾಮಾಜಿಕ ಸಿದ್ಧಾಂತ ದೇಶದ ರಾಜಕೀಯವನ್ನು ಆರ್ಯ-ದ್ರಾವಿಡ ಎಂಬ ಕಲ್ಪಿತ ನೆಲೆಯಲ್ಲಿ ಒಡೆಯಿತು. ಜಾತಿ-ಉಪಜಾತಿಗಳನ್ನು ಆಧರಿಸಿ ದೇಶದ ರಾಜಕೀಯಕ್ಕೆ ಹೊಸ ರಂಗು ಹಚ್ಚಿದ್ದು ಇ.ವಿ. ರಾಮಸ್ವಾಮಿಯವರ ಜಸ್ಟಿಸ್ ಪಾರ್ಟಿ. ಅದರ ಪಳೆಯುಳಿಕೆಗಳಾದ 'ದ್ರಾವಿಡ' ಪಕ್ಷಗಳು ಬರೀಜಾತಿಯಷ್ಟೇ ಅಲ್ಲದೇ ಹೊಸ 'ರೇಸ್‌ಥಿಯರಿ'ಯನ್ನೇ ಹುಟ್ಟುಹಾಕಿದ ನಂತರ ಜಾತಿಗಳ ರಾಜಕೀಯ ಸಂಘಟನೆ ಶುರುವಾಯಿತು.'ಇದು ಸಾಮಾಜಿಕ ನ್ಯಾಯ' ಎಂದು ಇಂತಹವರು ಹೇಳಿಬಿಟ್ಟರೆ ಮುಗಿಯಿತು, ಅದನ್ನು ಯಾರೂ ಪ್ರಶ್ನಿಸುವಂತಿಲ್ಲ.

ಈಗ ನಿರಂತರ ಜಾತಿ ಸಂಘರ್ಷದ ರಾಜಕೀಯ ಸಿದ್ಧಾಂತ ನಿರೂಪಣೆಯಾಗುತ್ತಿದೆ. ಈ ಹಿಂದೆ ವಸಾಹತು ವಾದಿಗಳು ಯಾವ ರೀತಿಯಲ್ಲಿ ತಮ್ಮ ಇಷ್ಟಾನುಸಾರ ತಮ್ಮ ತಮ್ಮ ಕಲ್ಪನೆಯ ಸಾಮಾಜಿಕ ಸಿದ್ಧಾಂತಗಳನ್ನು ಬರೆದು "ಇದೇ ನಿಜ" ಎಂದರೋ ಅದೇ ರೀತಿ ಆಧುನಿಕ ಎಡಪಂಥೀಯ ವೋಕ್-ಲಿಬರಲ್‌ಗಳು ತಮ್ಮದೇ "ಸೋಷಿಯಲ್ ಇಂಜಿನಿಯರಿಂಗ್" ಉದ್ದೇಶಗಳಿಗೆ ತಕ್ಕಂತೆ ಹೊಸ "ಸೋಷಿಯಲ್ ಥಿಯರಿ"ಗಳನ್ನು ಸೃಷ್ಟಿಸುತ್ತಿದ್ದಾರೆ.

ಯಾರು ಮೊದಲು ತಮ್ಮ ವೈಚಾರಿಕ ಸ್ವಾತಂತ್ರ್ಯವನ್ನು ಕಳೆದು ಕೊಂಡು ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್, ಮಾವೋಗಳಿಗೆ ಶರಣಾದರೋ ಅವರು ನಂತರ ಇತರರನ್ನೂ ಅದೇ ಪರಿಸ್ಥಿತಿಗೆ ನೂಕಿದ್ದೇ, ನೂಕಲು ಯತ್ನಿಸುವುದೇ, ಅವರ ಮಟ್ಟಿಗೆ 'ಕ್ರಾಂತಿ'! ಇದೂ ವ್ಯಕ್ತಿಪೂಜೆಯಲ್ಲದೇ ಬೇರೇನಲ್ಲ. ಮಾರ್ಕ್ಸ್, ಮಾವೋಗಳನ್ನು ದೇವರಂತೆಯೋ ಪ್ರವಾದಿಗಳಂತೆಯೋ ಭಾವಿಸುವ ಈ ನಾಯಕರೂ ಬುದ್ಧಿ ಜೀವಿಗಳೂ ಮಾರ್ಕ್ಸ್‌ಆಲಯದ ಪುರೋಹಿತರೇ. 'ಶಾಶ್ವತಕ್ರಾಂತಿ' ಯಂತಹ ಮುಗ್ಧ ನಂಬಿಕೆಗಿಂತಲೂ ದೊಡ್ಡ ಮೂಢನಂಬಿಕೆ ಇನ್ನೊಂದಿಲ್ಲ.

ಇದನ್ನು ವೈಚಾರಿಕ ಸ್ವಾತಂತ್ರ್ಯವಿರುವ ಭಾರತೀಯ ಸಂದರ್ಭಕ್ಕೆ ಹೋಲಿಸಿ ನೋಡಿ. ಇಲ್ಲಿ ಮೀಮಾಂಸಕರನ್ನು ಪ್ರಶ್ನಿಸಿ ಬುದ್ಧ ಬಂದ. ಬುದ್ಧನನ್ನು ಪ್ರಶ್ನಿಸಿ ಅನೇಕ ಆಚಾರ್ಯರು ಬಂದರು. ಹಿಂದಿನ ಆಚಾರ್ಯರನ್ನು ಪ್ರಶ್ನಿಸುವ ಹಲವು ಹೊಸ ಆಚಾರ್ಯರುಗಳು ಬಂದರು. ಅಂದರೆ, 'ಯಾವುದೇ ಮನುಷ್ಯ ಚಿಂತನೆಯೂ ದೋಷ ರಹಿತವಲ್ಲ ಅಂತಿಮವಲ್ಲ' ಎಂಬ ತತ್ತ್ವ ಹಾಗೂ ಜಾಯಮಾನ ಭಾರತದ ಜನಮಾನಸದಲ್ಲಿ ಅಂತರ್ಗತವಾಗಿದೆ. ಇಲ್ಲಿ ಯಾರು ಯಾರನ್ನೂ ಹಿಂಸಿಸದೇ ತಮ್ಮ ವಿಚಾರಗಳನ್ನು ಮಂಡಿಸಿದರು. ಚರ್ಚೆ, ಸಂವಾದ ನಡೆಸಿದರು. ತಮಗೆ ಯಾವುದು ಒಪ್ಪಿಗೆಯೋ ಅದನ್ನು ಸ್ವೀಕರಿಸುವ, ಬೇಡವೆನಿಸಿದರೆ ಎಲ್ಲವನ್ನೂ ತಿರಸ್ಕರಿಸುವ ಸ್ವಾತಂತ್ರ್ಯ ಜನರಿಗೆ ಅಂದೂ ಇತ್ತು, ಇಂದೂ ಇದೆ. ಇದು ಭಾರತದಂತಹ ಪ್ರಬುದ್ಧ ಸಮಾಜಗಳಲ್ಲಿ ಮಾತ್ರ ಸಾಧ್ಯ.

ಪಶ್ಚಿಮದ ತರಹದ 'ಪೋಪ್‌ಶಾಹಿ' ಭಾರತದಲ್ಲಿ ಎಂದಿಗೂ ಇರಲಿಲ್ಲ. ಇಲ್ಲಿ ತತ್ತ್ವಜ್ಞಾನ ಎಂಬುದು ನಿಂತ ನೀರಲ್ಲ. ದೊಣ್ಣೆನಾಯಕರಿಲ್ಲದೇ ಹರಿಯುವ ಜೀವಜಲ. ಇಲ್ಲಿ ಎಷ್ಟು ಜನರೋ ಅಷ್ಟು ದರ್ಶನಗಳು. ನಾಳೆಯೂ ಹೊಸ ಆಚಾರ್ಯರು ಉದಿಸಿ ಬರಬಹುದು. ಹಾಗೆ ಉದಿಸಲು ಯಾರದೇ ಅಡ್ಡಿಯಿಲ್ಲ. ಯಾವ ಪಕ್ಷದ ಅಪ್ಪಣೆಯೂ ಬೇಕಿಲ್ಲ. ಆದರೂ ಭಾರತದಲ್ಲಿ 'ಪುರೋಹಿತಶಾಹಿ' ಎಂಬ ಆಡಳಿತ ವ್ಯವಸ್ಥೆಯಿತ್ತು ಎಂಬ ಸುಳ್ಳನ್ನು ಕಮ್ಯುನಿಸ್ಟರು ಹರಡಲು ಯತ್ನಿಸಿದರು. ಯೂರೋಪಿನಲ್ಲಿ "ಪ್ರೀಸ್ಟ್‌ಹುಡ್" ವಿರುದ್ಧ ಮಾಡಲಾಗಿದ್ದ ಕಮ್ಯುನಿಸ್ಟ್‌ವಾದಗಳನ್ನು, ಪಟ್ಟುಗಳನ್ನು ಇಲ್ಲಿಗೂ ಎರವಲು ತಂದರು.

ಹೇಗಾದರೂ ಬ್ರಾಹ್ಮಣ ದ್ವೇಷವನ್ನು ಬಲವಾಗಿ ಬೇರೂರಿಸದಿದ್ದರೆ ಸಮಾಜವನ್ನು ಒಡೆಯುವುದು ಕಷ್ಟ ಎಂಬುದು ದೇಶ ವಿರೋಧಿ ಶಕ್ತಿಗಳಿಗೆ ಚೆನ್ನಾಗಿ ಗೊತ್ತಿದೆ. ಇದು ವಾಸ್ತವವಾಗಿ ಬ್ರಾಹ್ಮಣ-ದ್ವೇಷವಲ್ಲ,

ಭಾರತ–ದ್ವೇಷ. ಇದರ ಬೇರುಗಳು ವಿದೇಶಿ ನೆಲದಲ್ಲಿವೆ. ಇಲ್ಲಿ ಕಾಣುತ್ತಿರುವುದು ಬಿಳಿಲುಗಳು ಮಾತ್ರ. ಈ ರೀತಿಯ ಒಡೆದು ಆಳುವ ತಂತ್ರವನ್ನೇ ಬ್ರಿಟಿಷರು ಅನುಸರಿಸಿದ್ದು.ಈಗ ಒಡೆದು ಅಳಿಸಿಹಾಕುವ ತಂತ್ರವನ್ನು ಚೀನಾ, ಪಾಕಿಸ್ತಾನ ಹಾಗೂ ಅಮೆರಿಕದ "ಲಿಬರಲ್" ಶಕ್ತಿಗಳು ಹೆಣೆದಿರಬಹುದೇನೋ ಎಂಬ ಅನುಮಾನಗಳೆದ್ದಿವೆ.

ಪಾಕಿಸ್ತಾನದ ಐಎಸ್ಐ ತರಹದ ಶಕ್ತಿಗಳು ಭಾರತದಲ್ಲಿ ನಡೆಯುವ ಯಾವುದೇ ಕಿಡಿಗೇಡಿಗಳ ದುಷ್ಟ ಕೃತ್ಯಗಳನ್ನು ಬೇಕಾದರೂ ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಂಡು ಅದನ್ನು ದೇಶದ ವಿರುದ್ಧವೇ ತಿರುಗಿಸಬಲ್ಲವು. ಭಾರತ ವಿರೋಧಿ ಅಲೆ ಎಬ್ಬಿಸಲು ಯತ್ನಿಸಬಲ್ಲವು. ಹಿಂದೆ ಐಎಸ್ಐ ನಡೆಸುತ್ತಿದೆ ಎನ್ನಲಾದ 'ದಲಿತ್‌ಸ್ತಾನ್' ಆಂದೋಲನ ಜೋರಾಗಿತ್ತು. ಪಂಜಾಬಿನ (ಪಾಕ್–ಪ್ರೇರಿತ) 'ಖಾಲಿಸ್ತಾನ್' ಆಂದೋಲನ ವಿಫಲವಾಗಿದ್ದ ಸಮಯದಲ್ಲಿ (ಅದನ್ನು ಮತ್ತೆ ಚಿಗುರಿಸಲಾಗುತ್ತಿದೆ) ಚುರುಕಾದ ಆಂದೋಲನ ಅದು. ಇದ್ದಕ್ಕಿದ್ದ ಹಾಗೆ ದೇಶಾದ್ಯಂತ ಎಲ್ಲೆಡೆ 'ದಲಿತ್–ಮುಸ್ಲಿಂ' ಎಂಬ ಸ್ಲೋಗನ್ ಶುರುವಾಯಿತು. 'ದಲಿತರು ಹಾಗೂ ಮುಸ್ಲಿಮರು ಒಂದಾಗಿ ಭಾರತ ದಿಂದ ಪ್ರತ್ಯೇಕವಾಗಬೇಕು' ಎಂಬ ವಾದ ಹೆಚ್ಚಾಗಿ ಕೇಳಿಬರತೊಡಗಿತು. ದಲಿತ್‌ಸ್ತಾನ್ ಹೆಸರಿನಲ್ಲಿ ವೆಬ್‌ಸೈಟ್ ಸಹ ಸೃಷ್ಟಿಯಾಯಿತು (ಅದನ್ನು ನಂತರ ನಿಷೇಧಿಸಲಾಯಿತು). ಇತರ ಶಕ್ತಿಗಳೂ 'ದಲಿತ–ರಾಜಕೀಯ'ದ ಲಾಭ ಪಡೆಯಲು ಜೋರಾಗಿ ಅಖಾಡಕ್ಕಿಳಿದವು. "ದಲಿತರೆಂದರೆ ಭಾರತದ ಕಪ್ಪು ನೀಗ್ರೋಗಳು; ಭಾರತದ ಮೂಲನಿವಾಸಿಗಳು ಅವರು ಮಾತ್ರ; ಅವರದು ಪ್ರತ್ಯೇಕ ರೇಸ್ (ಜೈವಿಕ–ಜನಾಂಗ); ಅವರನ್ನು ಇತರ ಆರ್ಯರು ದಬ್ಬಾಳಿಕೆಯಿಂದ ಆಳುತ್ತಿದ್ದಾರೆ; ಅವರು ತಮ್ಮದೇ ಹೋಮ್‌ಲ್ಯಾಂಡ್ ಸ್ಥಾಪಿಸಿಕೊಳ್ಳಬೇಕಿದೆ" – ಎನ್ನುವವರೆಗೂ ಭಾರತ–ಒಡೆಯುವ ಸಂಚು ಬೆಳೆಯಿತು.

"ಕ್ಯಾಸ್ಟ್" ಎನ್ನುವುದು ಮೂಲತಃ ಪೋರ್ಚುಗೀಸ್ (ಹಾಗೂ ಸ್ಪ್ಯಾನಿಷ್) ಭಾಷೆಯ "ಕ್ಯಾಸ್ಟಾ" ಎಂಬ ಪದದಿಂದ ಹುಟ್ಟಿರುವಂತಹುದು. ಕ್ಯಾಸ್ಟಾ ಎನ್ನುವುದು ಜೈವಿಕ ಜನಾಂಗೀಯ (ರೇಸಿಸ್ಟ್) ಅರ್ಥವನ್ನು ಕೊಡುವ ಪದ. ಭಾರತದಲ್ಲಿ ವರ್ಣ, ಜಾತಿ, ಕುಲ – ಎಂಬ ಪದಗಳು ರೇಸಿಸ್ಟ್ ಆಗಿರಲಿಲ್ಲ. ಅವುಗಳ ನಡುವೆ ಶಾಶ್ವತವಾದ ಕೋಟೆ ಇರಲಿಲ್ಲ. ಅವೆಲ್ಲ ವ್ಯಕ್ತಿಗತವಾದ ಕೌಶಲಗಳು ಹಾಗೂ ಸಾಮುದಾಯಿಕ ಕಸುಬುಗಳು – ಇವುಗಳನ್ನು ಆಧರಿಸಿದ್ದ ಕಲ್ಪನೆಗಳು. ಹಾಗಿದ್ದರಿಂದಲೇ ಸಾವಿರಾರು ಜಾತಿಗಳನ್ನು ಕಾಣಬಹುದು. ಜಾತಿ ಎನ್ನುವುದು "ರೇಸ್" ಆಗಿದ್ದರೆ "ಸಾವಿರಾರು ರೇಸ್‌ಗಳಿರಲು ಸಾಧ್ಯ" ಎನ್ನಬೇಕಾಗುತ್ತದೆ! ಜಾತಿಗಳು ಬದಲಾಗುತ್ತಿದ್ದ ನಿದರ್ಶನಗಳು ಸಾಕಷ್ಟಿವೆ. ವೇದಮಂತ್ರಗಳನ್ನು ಜಗತ್ತಿಗೆ ಕೊಟ್ಟಿರುವ ಅನೇಕ ಮಹರ್ಷಿಗಳು ಸಮಾಜದ ವಿವಿಧ ಸಮುದಾಯಗಳಿಂದ ಬಂದವರು. ದೀರ್ಘತಮಸ್ ಹುಟ್ಟುಕುರುಡರು, ವಿಶ್ವಾಮಿತ್ರರು ಮೊದಲಿಗೆ ಕ್ಷತ್ರಿಯರು. ವೇದವ್ಯಾಸರು ಮೀನುಗಾರ ಮಹಿಳೆಯ ಮಗ, ವಾಲ್ಮೀಕಿ ಬೇಡರ ಕುಲದವರು, ಅಗಸ್ತ್ಯರು ಮಡಕೆಯೊಳಗೆ (ಕುಂಭ) ಹುಟ್ಟಿದವರು. ಸತ್ಯಕಾಮ ಜಾಬಾಲಿ ತಂದೆ ಯಾರೆಂದು ತಿಳಿಯದವರು–ಹೀಗೆ ಪಟ್ಟಿ ದೊಡ್ಡದಿದೆ. ಅದಕ್ಕೇ "ಋಷಿಮೂಲ ನೋಡಬಾರದು, ಅವರ ಜ್ಞಾನವನ್ನು ನೋಡಬೇಕು" ಎನ್ನಲಾಗುತ್ತದೆ. ಅಂದರೆ ಭಾರತದಲ್ಲಿ ಜೈವಿಕ ಜನಾಂಗೀಯ ನೆಲೆಯ "ಕ್ಯಾಸ್ಟ್" ಎಂಬ ಪರಿಕಲ್ಪನೆ ಇರಲಿಲ್ಲ. ಆದರೂ ಒಂದೊಂದು ಜಾತಿಯನ್ನೂ ಒಂದೊಂದು "ಕ್ಯಾಸ್ಟ್" ಎಂಬ ಹುಚ್ಚು ಕಲ್ಪನೆಯನ್ನು ಬ್ರಿಟಿಷರು ತಂದರು. ಜಾತಿಗಳನ್ನು ಶಾಶ್ವತ ಅಸ್ಮಿತೆ ಎಂಬಂತೆ ಮಾಡಿ ಅವು ಬದಲಾಗಬಹುದಾದ ಸನ್ನಿವೇಶಗಳನ್ನು ಅಳಿಸಿಹಾಕಿದರು. "ಕ್ಯಾಸ್ಟ್" ಎನ್ನುವುದು ಭಾರತದ್ದೇ ಕಲ್ಪನೆ ಎಂಬಂತೆ ಉಪಾಯವಾಗಿ ಪ್ರಚಾರ ಮಾಡಿದರು. ಈಗಲೂ ಇಂತಹವರ ಚೇಷ್ಟೆಯನ್ನು ಪಶ್ಚಿಮದವರು, "ವೋಕ್ ಲಿಬರಲ್‌ಗಳು" ಮಾಡುತ್ತಿದ್ದಾರೆ. ಈಗ ಪಶ್ಚಿಮದಲ್ಲಿ ಅಬ್ಬರಿಸುತ್ತಿರುವ "ವೋಕಿಸಂ" ಎಂಬ ಹೊಸ ಅಸಹಿಷ್ಣು ಚಳವಳಿಯ ಹಿಂದಿರುವುದು "ಕ್ರಿಟಿಕಲ್‌ರೇಸ್‌ಥಿಯರಿ" ಎಂಬ ವೋಕ್–ವಿಚಾರವಾದ. ಅದನ್ನೇ ಎಲ್ಲದೇಶ, ಕಾಲ, ಸಂದರ್ಭಗಳಿಗೂ ಅನ್ವಯಿಸಿ ಹೊಸ ವಾದಗಳನ್ನು ಸೃಷ್ಟಿಸಿ ಹರಡಲಾಗುತ್ತಿದೆ.

'ಹಿಂದೂಗಳಲ್ಲಿ ಜಾತಿ ಪದ್ಧತಿ ಇರುವವರೆಗೆ ಮತಾಂತರಗಳು ನಡೆಯುತ್ತಲೇ ಇರುತ್ತವೆ' ಎಂಬ ವಾದವನ್ನು ಬಹಳ ಹಿಂದೆಯೇ ಹುಟ್ಟು ಹಾಕಲಾಗಿದೆ. ಹಾಗಿದ್ದರೆ ವಿಶ್ವಪ್ರಸಿದ್ಧ ಗ್ರೀಕ್ ನಾಗರಿಕತೆಯನ್ನು ಮಿಷನರಿ ಚರ್ಚ್ ಹೊಸಕಿ ಹಾಕಿ ನಾಮಾವಶೇಷ ಮಾಡಿದ್ದೇಕೆ? ಅಲ್ಲೆಲ್ಲ ಜಾತಿ ಪದ್ಧತಿಯಂತಹ "ದೋಷಗಳು" ಇದ್ದವೆ? ಮಿಷನರಿಗಳು ತಮ್ಮ ಮತ ವಿಸ್ತರಣೆಯನ್ನು ಸಮರ್ಥಿಸಲು ಒಂದೊಂದು ದೇಶದಲ್ಲಿ ಒಂದೊಂದು ಕಾರಣಕೊಡುತ್ತಾರೆ. ಅದನ್ನು ಆಯಾ ದೇಶಗಳ ಹುಂಬರು, ಮನೆಮುರುಕರು ಬೆಂಬಲಿಸುತ್ತಾರೆ. ಚರ್ಚುಗಳು ಈಗ ದಕ್ಷಿಣ ಕೊರಿಯಾದ ಬೌದ್ಧಮತದ ಮೇಲೆ ಹೇಗೆ ಆಕ್ರಮಣ ಮಾಡುತ್ತಿವೆ ಎಂಬುದೂ ಗಮನಾರ್ಹ. ಕಳೆದ 10 ವರ್ಷಗಳಲ್ಲಿ ಆ ದೇಶದಲ್ಲಿ ಕ್ರೈಸ್ತರ ಸಂಖ್ಯೆ ಬಹಳ ಹೆಚ್ಚಾಗಿದೆ. ವಿದೇಶಿ ಚರ್ಚಿನ ಆಡಳಿತವನ್ನು ಬಹುಮಟ್ಟಿಗೆ ಸ್ಥಾಪಿಸಿಯಾಗಿದೆ.

'ಐಡಿಯಾಲಜಿಕಲ್ ಇನ್‌ಡಾಕ್ಟ್ರಿನೇಷನ್', ಅಂದರೆ ತಮ್ಮ ಮತೀಯ ಹಾಗೂ ರಾಜಕೀಯ ಸಿದ್ಧಾಂತಗಳನ್ನು ವಿದ್ಯಾರ್ಥಿಗಳ ತಲೆಗಳಿಗೆ ತುಂಬುವುದು ಯಾವಾಗ ವಿಶ್ವವಿದ್ಯಾಲಯಗಳಲ್ಲಿ ತೀವ್ರವಾಯಿತೋ (ಹಿಂದೆಯೂ ಇತ್ತು) ಅಲ್ಲಿಂದಾಚೆಗೆ ಅವು ಬರೀಕಲಿಕೆಯ ಕೇಂದ್ರಗಳಾಗಿ ಉಳಿದಿಲ್ಲ. ಈಗಂತೂ ಅನೇಕ 'ಪ್ರತಿಷ್ಠಿತ' ವಿಶ್ವವಿದ್ಯಾಲಯಗಳು ರಾಜಕೀಯ ಪಕ್ಷಗಳ ಕ್ರೀಡಾಂಗಣಗಳು, ರಾಜಕೀಯ–ಪ್ರೇರಿತ ಎನ್‌ಜಿಓಗಳ ಪ್ರಯೋಗಾಲಯಗಳು, ವಿದೇಶಿ ಶಕ್ತಿಗಳ ಹಾಗೂ ಮತೀಯ ಸಂಘಟನೆಗಳ ಗಮ್ಯಸ್ಥಾನಗಳು ಎನ್ನುವಂತಾಗಿವೆ. ಮನೆಯಿಂದ ಕಾಲೇಜಿಗೆ ತಮ್ಮ ಮಕ್ಕಳನ್ನು ಕಳುಹಿಸುವ ತಂದೆತಾಯಿಗಳು ತಮ್ಮ ಮಗ, ಮಗಳು ಯಾವ ಪ್ರೊಫೆಸರ್‌ಗಳ 'ಬ್ರೇನ್‌ವಾಷ್'ಗೆ ಒಳಗಾಗುತ್ತಾರೋ, ಯಾವ ಯಾವ ಸಂಸ್ಥೆಗಳನ್ನು ಸೇರಿಕೊಳ್ಳುತ್ತಾರೋ, ಯಾವ ರಾಜಕಾರಣಿಗಳ ಆಟದ ಪಾನ್‌ಆಗುತ್ತಾರೋ, ಯಾವ್ಯಾವ "ಚಳವಳಿ"ಗೆ ಇಳಿಯುತ್ತಾರೋ ಎಂಬ ಆತಂಕ ಇಟ್ಟುಕೊಳ್ಳುವಂತಾಗಿದೆ.

ಕೆಲವು ವಿಶ್ಲೇಷಕರ ಪ್ರಕಾರ, ಅಮೆರಿಕ ಈಗ ಎಡಬುದ್ಧಿಜೀವಿಗಳನ್ನು ಉಪಾಯವಾಗಿ ತನ್ನ ಬೌದ್ಧಿಕ ದಾಳಿಕೋರರಂತೆ ಬಳಸಿಕೊಳ್ಳುತ್ತಿದೆ! ಸಿಐಎ ವಿವಿಧ ಫೌಂಡೇಷನ್, ಎನ್‌ಜಿಓಗಳಿಗೆ ರಹಸ್ಯವಾಗಿ ಹಣ ಕೊಡುತ್ತದೆ; ಅವು ಎಡ ಬುದ್ಧಿಜೀವಿಗಳನ್ನು, ಮಿಷನರಿಗಳನ್ನು ವಿವಿಧ ದೇಶಗಳಲ್ಲಿ ನಿಶ್ಚಿತ ಉದ್ದೇಶಗಳಿಗೆ ಬಳಸಿಕೊಳ್ಳುತ್ತವೆ; ವಿವಿಧ ಸಂಸ್ಥೆಗಳ ಮೂಲಕ ಈ ಬುದ್ಧಿಜೀವಿಗಳಿಗೆ ಪ್ರಶಸ್ತಿಯ ಹೆಸರಿನಲ್ಲೂ ಹಣ ಹರಿದು ಬರುತ್ತದೆ.

ಈಗ ಎಲ್ಲ ಲೌಕಿಕ, ಅಲೌಕಿಕ ವಿದ್ಯಮಾನಗಳನ್ನೂ ಜಾತಿ, ಮತ, ಲಿಂಗ ಹಾಗೂ ಲೈಂಗಿಕತೆಯ ಆಯಾಮಗಳಿಂದ 'ವಿಶ್ಲೇಷಿಸುವುದು' ಹೆಚ್ಚಾಗುತ್ತಿದೆ. ಇಂದಿನ ಬೌದ್ಧಿಕ ವಿಶ್ಲೇಷಣೆಗಳು ನಾಳೆಯ ಹೋರಾಟಗಳಾಗಲಿ ಎಂಬುದೇ ಇಂತಹ ಥಿಯರಿಗಳ ಜನಕ, ಜನನಿಯರ ಆಶಯ. ಒಟ್ಟಿನಲ್ಲಿ, ಇಂತಹವರ ಕೃಪೆಯಿಂದ ದೇಶದಲ್ಲಿ ಯಾವ ಕ್ಷೇತ್ರವೂ ನೆಮ್ಮದಿಯಾಗಿ ಇರುವಂತಿಲ್ಲ. ಇವರ 'ಸೋಷಿಯಲ್ ಇಂಜಿನಿಯರಿಂಗ್' ಕಾಲಿಡದ ಜಾಗವೇ ಇಲ್ಲ.

# ತಿಂಗಳ ರಾಶಿ ಫಲ

–ಜ್ಯೋತಿಷಿ ವಿ॥ ಮುದ್ರಾಡಿ ವಾಸುದೇವ ಭಟ್



**ಮೇಷ ರಾಶಿ** : ಇದು ರಾಶಿ ಚಕ್ರದ ಮೊದಲ ರಾಶಿ. ಚರ ರಾಶಿ. ಕ್ರೂರ ರಾಶಿ. ಇವರು ಎಲ್ಲದರಲ್ಲಿ ಮೊದಲಿಗ ರಾಗಿರುತ್ತಾರೆ. ಚರ ಸ್ವಭಾವದವರಾಗಿರುತ್ತಾರೆ. ಗುರುಬಲ ಚೆನ್ನಾಗಿದೆ. ಅದೃಷ್ಟಲಕ್ಷ್ಮೀ ಒಲಿಯುತ್ತಾಳೆ. ನಿಂತ ಕಾರ್ಯರೂಪಗಳೆಲ್ಲ ಪ್ರಾರಂಭವಾಗುತ್ತದೆ. ಹೀಗಾಗಿ ಮಾನಸಿಕ ನೆಮ್ಮದಿ ಉಂಟಾಗಲಿರುವುದು. ಆದರೆ ಇದೀಗ ಭಾಗ್ಯಕ್ಕೆ ಬಂದ ಭಾಗ ಪುತ್ರನಿಂದಾಗಿ ಭೂಸಂಬಂಧಿಯಾದ ಕಿರಿಕಿರಿ ಉಂಟಾಗಬಹುದು. ದೇವೀ ಆರಾಧನೆಯಿಂದ ಭಾಗ್ಯ ಅಭಿವೃದ್ಧಿಯಾಗಲಿರುವುದು.



**ವೃಷಭ** : ಪ್ರಾರಂಭಿಸಿದ ಕೆಲಸಗಳು ಅಲ್ಲಲ್ಲೆ ನಿಂತು ಅದರಿಂದ ಆರ್ಥಿಕ ತೊಂದರೆ, ಮಾನಸಿಕ ಕಿರಿಕಿರಿ. ಇದರಿಂದ ಅನಾರೋಗ್ಯ. ಸಮಾಜದಿಂದಲೂ ಪ್ರತಿಕೂಲ. ವ್ಯರ್ಥ ತಿರುಗಾಟ. ಒಟ್ಟಿನಲ್ಲಿ ನೆಮ್ಮದಿ ಹಾಳಾಗಬಹುದು. ಸದ್ಯ ಎಲ್ಲದಕ್ಕೂ ಉದಾಸೀನತೆಯೇ ಮದ್ದು. ಸುಬ್ರಹ್ಮಣ್ಯ ಆರಾಧನೆಯಿಂದ ಇಷ್ಟ ಸಿದ್ಧಿಸುವುದು.



**ಮಿಥುನ** : ಗುರುಬಲವಿದೆ. ಆದರೆ ಅಷ್ಟಮದಲ್ಲಿ ಶನಿಯೂ ಇದ್ದಾನೆ. ನೀವು ಬೆಲ್ಲ ಜೀರಿಗೆ ಅನುಭವಿಸಬೇಕು. ನೋಡಿ ಕಾಲಿಡಬೇಕು. ಬಹುಕಾಲದಿಂದ ಇದ್ದ ಮಿತ್ರರು ದೂರವಾಗ ಬಹುದು. ಅನಾರೋಗ್ಯ, ಆರ್ಥಿಕ ನಷ್ಟ, ಅವಮಾನ, ಅಪಜಯದ ಬಗ್ಗೆ ಜಾಗೃತಿ ಇರಬೇಕು. ಅಶ್ವತ್ಥ ಸೇವೆ, ವಿಷ್ಣು ಸಹಸ್ರನಾಮ ಪಾರಾಯಣದಿಂದ ಇಷ್ಟ ಸಿದ್ಧಿಸುವುದು.



**ಕರ್ಕಾಟಕ** : ಚಂದ್ರನಂತೆ ಜೀವನ ಉಳ್ಳವರು. ಚೆನ್ನಾಗಿರು ವರು. ಚಂಚಲಚಿತ್ತರು. ವಿಹಾರಿಗಳು, ಎಲ್ಲ ಕೆಲಸ ಆರಂಭಿಸಿ ನಂತರ ಬದಲಾಯಿಸಿ ಬಿಡುವರು. ಇದಮಿಷ್ಟಂ ಎಂಬುದೇ ಇಲ್ಲ. ಮುಂಗೋಪಿಗಳು, ಅದರಿಂದ ನಷ್ಟಕ್ಕೊಳಗಾಗುವರು. ಎಲ್ಲ ಗ್ರಹಕ್ಕೂ ಪ್ರತಿಕೂಲ ಸ್ಥಾನದಲ್ಲಿರುವರು. ತತ್ಪರಿಣಾಮ ವ್ಯವಹಾರ ನಷ್ಟ. ಆರೋಗ್ಯ ನಷ್ಟ. ಆರ್ಥಿಕ ತೊಂದರೆ, ಕುಂದು. ಸಮಾಜದಿಂದ ಪ್ರತಿಕೂಲ. ಆದ್ದರಿಂದ ಏನಾದರೂ ಕೆಲಸ ಪ್ರಾರಂಭಿಸುವುದಾದರೆ ಮುಂದೆ ಉತ್ತಮ. ಈಶ್ವರಾಧನೆಯಿಂದ ಇಷ್ಟ ಸಿದ್ಧಿಸುವುದು.



**ಸಿಂಹರಾಶಿ** : ಗುರುಬಲವಿದೆ. ಅದೃಷ್ಟ ಚೆನ್ನಾಗಿದೆ. ಕೈಗೊಂಡ ಕಾರ್ಯಕಲಾಪಗಳೆಲ್ಲ ನೀರು ಕುಡಿದಂತೆ ಸರಾಗವಾಗಿ ನೆರವೇರುವುದು. ಆಯುರಾರೋಗ್ಯಭಾಗ್ಯ, ವಿದ್ಯೆಗೆ ಅನುಕೂಲ, ರಾಜಕೀಯದವರಿಗೂ ಅನುಕೂಲ, ಮನೆಯಲ್ಲಿ ನಿಂತು ಹೋದ ಕಲ್ಯಾಣಾದಿ ಸಕಲ ಶುಭಕಾರ್ಯಗಳು ನಿರ್ವಿಘ್ನವಾಗಿ ನಡೆಯಲಿರುವುದು.



**ಕನ್ಯಾರಾಶಿ** : 'ಸ್ತ್ರೀನಾಮ್ಯೈತಿಪೇಶಲಂ' ಎಂಬಂತೆ ಇವರನ್ನು ಕಂಡರೆ ಎಲ್ಲರಿಗೂ ಪ್ರೀತಿ. ಆದರೂ ಮಾನಸಿಕ ನೆಮ್ಮದಿ ಇರಲಾರದು. ಆಧ್ಯಾತ್ಮಿಕ ತೊಂದರೆ ಉಂಟಾಗಬಹುದು. ಆದಿ ವ್ಯಾಧಿಗಳಿಂದ ತೊಂದರೆಯಾದೀತು. ಆರ್ಥಿಕ ನಷ್ಟಕ್ಕೆ ಅವಕಾಶವಿರುವುದು. ಕೈಗೊಂಡ ಕಾರ್ಯಕಲಾಪಗಳು ಅಲ್ಲಿ ನಿಂತುಹೋಗಲು ಅವಕಾಶವಿರುವುದು. ಮೌನ ಬಂಗಾರ, ಸದ್ಯಕ್ಕೆ ವಿಷ್ಣುಸಹಸ್ರನಾಮದಿಂದ ಇಷ್ಟಾರ್ಥ ಸಿದ್ಧಿಸುವುದು.



**ತುಲಾ ರಾಶಿ:** ದೇವರು ದಿಂಡರಲ್ಲಿ ಗೌರವವುಳ್ಳವರು. ಉಪಕಾರಿಗಳು, ಬಂಧು ಕುಟುಂಬದ ಪ್ರಿಯರು, ಯಾರನ್ನು ನಂಬುತ್ತಾರೋ ಅವರೇ ಇವರಿಗೆ ಕೈಎತ್ತುವರು, ಕೈಕೊಡುವರು. ಇಷ್ಟಾದರೂ ಗುರುಬಲವಿದೆ. ಆದ್ದರಿಂದ ವಿದ್ಯೆ, ಉದ್ಯೋಗ, ವ್ಯವಹಾರಗಳಿಂದ ಅನುಕೂಲವಾಗಲಿರುವುದು. ಸಮಾಜದಲ್ಲಿ ಕಳೆದುಹೋದ ಸ್ಥಾಮಾನ ಸಿಗಲಿರುವುದು. ಸದ್ಯ ಅದೃಷ್ಟಶಾಲಿಗಳಿವರು.



**ವೃಶ್ಚಿಕರಾಶಿ** : 'ವೃಶ್ಚಿಕಸ್ಯಾರಸಂ ವಿಷಯರಸಂ' ಇದು ಇಡೀ ರಾಶಿ ಲಕ್ಷಣ. ಗ್ರಹಗಳು ಪ್ರತಿಕೂಲ ಸ್ಥಾನದಲ್ಲಿರುವು ದರಿಂದ ಇದ್ದೂ ಇಲ್ಲದಂತಹ ಪರಿಸ್ಥಿತಿ ಉಂಟಾಗಬಹುದು. ಇದಕ್ಕೆಲ್ಲ ಮದ್ದು ಸುಬ್ರಹ್ಮಣ್ಯ ಆರಾಧನೆ. ಅದರಿಂದ ಇಷ್ಟಾರ್ಥ ಸಿದ್ಧಿಸುವುದು. ಪ್ರಿಯರು, ಯಾರನ್ನು ನಂಬುತ್ತಾರೋ ಅವರೇ ಇವರಿಗೆ ಕೈಎತ್ತುವರು, ಕೈಕೊಡುವರು. ಇಷ್ಟಾದರೂ ಗುರುಬಲವಿದೆ. ಆದ್ದರಿಂದ ವಿದ್ಯೆ, ಉದ್ಯೋಗ, ವ್ಯವಹಾರಗಳಿಂದ ಅನುಕೂಲವಾಗಲಿರುವುದು. ಸಮಾಜದಲ್ಲಿ ಕಳೆದುಹೋದ ಸ್ಥಾಮಾನ ಸಿಗಲಿರುವುದು. ಸದ್ಯ ಅದೃಷ್ಟಶಾಲಿಗಳಿವರು.



**ಧನುರಾಶಿ** : ಇತ್ತೀಚೆಗೆ ಅನಾರೋಗ್ಯದ ಕಾಟ, ಆರ್ಥಿಕ ತೊಂದರೆ, ಹಿತಶತ್ರುಗಳ ಕಾಟ, ಮಾನಸಿಕ ಅಶಾಂತಿ, ಕಿನ್ನತೆ, ಕೈಕೊಂಡ ಕಾರ್ಯಗಳಿಗೆ ವಿಘ್ನ, ನಂಬಿದವರ ವಂಚನೆ, ರಾಜಕೀಯದಿಂದಲೂ ಪ್ರತಿಕೂಲ. ಯಾಕೋ ಕಾಲ ಸರಿಯಿಲ್ಲ, ಒಟ್ಟಿನಲ್ಲಿ ದೈವ ಪ್ರತಿಕೂಲವಾಗಿದೆ. ಕೈಗೊಂಡ ಕಾರ್ಯಕ್ರಮಗಳನ್ನು ಮುಂದೂಡುವುದರಿಂದಲೆ ಭವಿಷ್ಯದಲ್ಲಿ ಅನುಕೂಲಗಳಾಗಲಿರುವುದು.



**ಮಕರ ರಾಶಿ** : 'ಯುಷಾಣಾಂ ಮಕರೇಚ್ಚಾಸ್ಮ' ಎಂಬಂತೆ ಇದು ಭಗವಂತನ ರೂಪರಾಶಿ. ಗುರು ನಿಮ್ಮ ಪಾಲಿಗೆ ಇದ್ದಾನೆ. ಆದ್ದರಿಂದ ಅದೃಷ್ಟ ಚೆನ್ನಾಗಿದೆ. ಬೇಕಾದ್ದು ಮಾಡಬಹುದು. ಮುಟ್ಟಿದ್ದು ಚಿನ್ನವಾಗಬಹುದು. ನೀವೇ ಬೃಹಸ್ಪತಿ. ಕಳೆದುಹೋದದ್ದೆಲ್ಲ ಬಂದು ಸೇರುವುದು. ಸರಕಾರದಿಂದ ಅನುಕೂಲ, ಇದರಿಂದಾಗಿ ಆರೋಗ್ಯಭಾಗ್ಯ, ಮಾನಸಿಕ ನೆಮ್ಮದಿ.



**ಕುಂಭ ರಾಶಿ:** ಕೈಯಲ್ಲಿ ಇಲ್ಲದಿದ್ದರೂ ಕಡತಂದು ಗೌರವ ಉಳಿಸಿಕೊಳ್ಳಬೇಕಾಗುತ್ತದೆ. ಆಯಕ್ಕಿಂತ ವ್ಯಯವೇ ಜಾಸ್ತಿ. ನೋಡಲಿಕ್ಕೆ ಎಲ್ಲ ಉಂಟು, ಆದರೆ ಯಾವ ಕೆಲಸವು ಮನ್ನಡೆಯಲಾರದು. ಆರೋಗ್ಯಕ್ಕೆ ಧಕ್ಕೆ, ಮಾನಸಿಕ ದುಗುಡ, ಭವಿಷ್ಯದ ಬಗ್ಗೆ ಚಿಂತನೆ. ಆದರೂ ಗುರುಬಲವಿರುವುದರಿಂದ ಚಿಂತೆಪಡುವ ಅಗತ್ಯವಿಲ್ಲ. ಭಾಗ್ಯೋದಯವಾಗಲಿರುವುದು.



**ಮೀನರಾಶಿ** : ಲಾಭದಲ್ಲಿ ಶನಿಯಿದ್ದಾನೆ. ಒಂದು ಕೈಯಲ್ಲಿ ಬರ್ತದೆ. ವ್ಯಯದಲ್ಲಿ ಗುರು ಇದ್ದಾನೆ. ಇನ್ನೊಂದು ಕೈಯಲ್ಲಿ ಖರ್ಚಾಗ್ತದೆ. ರಿಸ್ಕ್ ಅಂದರೆ ದುಡುಕಬಾರದು. ಸಮಾಧಾನ ಚಿತ್ತದಿಂದ ಇದ್ದು ಕಾರ್ಯಕಲಾಪಗಳನ್ನೆಲ್ಲ ಮುಂದೂಡಿದಲ್ಲಿ ಮುಂದೆ ಗುರುಬಲ ಬಂದಾಗ ಎಲ್ಲವೂ ಸರಿದಾರಿಗೆ ಬರಲಿರುವುದು. ಸದ್ಯಕ್ಕೆ ಸುಮ್ಮನಿದ್ದಲ್ಲಿ ಭವಿಷ್ಯ ಚೆನ್ನಾಗಿರುವುದು. ಗಣೇಶನ ಆರಾಧನೆಯಿಂದ ವಿಘ್ನಗಳೆಲ್ಲ ಪರಿಹಾರವಾಗಿ ಆಯುರಾರೋಗ್ಯಭಾಗ್ಯ ಲಭಿಸಲಿರುವುದು. **'ಸಕಲ ಗ್ರಹ ಬಲ ನೀನೆ ಸರಸಿಜಾಕ್ಷ'** ಎನ್ನುವವರಿಗೆ ಗ್ರಹವೆಲ್ಲ ಅನುಕೂಲ ರಾಗಲಿರುವರು.

**ಸರ್ವೇಜನಾಃ ಸುಖಿನೋಭವಂತು,**

**ಎಲ್ಲರಿಗೂ ಒಳ್ಳೆಯದಾಗಲಿ. ಶುಭಮಸ್ತು.**

## ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು-560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
"ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080-26793054 ಮೊಬೈಲ್ 8277433666**

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ,
ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ
ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ,
ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು

**ಸ್ಥಳದ ಬಾಡಿಗೆ ಇರುವುದಿಲ್ಲ.**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**

**ದೂರವಾಣಿ : 2672 2267, 98866 55755**

॥ ನಂಬಿ ಬಂದವರ ಪಾಲಿಗೆ ಕಾಮಧೇನು, ಭಕ್ತರ ಪಾಲಿಗೆ ಕಲ್ಪವೃಕ್ಷ ॥

# ಶ್ರೀ ಗುರುರಾಘವೇಂದ್ರ ಜೋತಿಷ್ಯ ಕೇಂದ್ರ

## ಕಟೀಲು ಶ್ರೀ ದುರ್ಗಾಪರಮೇಶ್ವರಿ ಆರಾಧಕರು



ವೇದಬ್ರಹ್ಮ ಜ್ಯೋತಿಷ್ಯ ರತ್ನಕರ ರಾತ್ರಿಯತ್ರಿಕಲಾ ಜ್ಞಾನಿ : ಆಚಾರ್ಯ ಶ್ರೀ ವಿಜಯೇಂದ್ರ ಗುರುಜೀ ಕೇರಳ ಪ್ರವಾಸ ತಾಂತ್ರಿಕರು ಆಧ್ಯಾತ್ಮಿಕ ಚಿಂತಕರು, ಜೊತಿಷ್ಯ ವಾಸ್ತ ಮಂತ್ರಶಕ್ತಿ ಪರಿಣಿತರು ಅಷ್ಟಮಂಗಲ ದೈವಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಸತ್ಯಸಾರಾಂಶವಾಗಿ ನುಡಿಯುತ್ತಾರೆ. ಜೀವನದಲ್ಲಿ ಮನುಷ್ಯ ಒಂದಲ್ಲ ಒಂದು ಎಷ್ಟೇ ಪ್ರಾಮಾಣಿಕವಾಗಿ ಜೀವನ ನೆಡೆಸದವರು ಸಮಸ್ಯೆಗಳ ಬೆಂಬಿಡದೆ ಕಾಡುತ್ತಿರುತ್ತದೆ. ಚಿಂತಿಸಬೇಡಿ ಭಗವಂತ ನಂಬಿದವರನ್ನು ಎಂದಿಗೂ ಕೈಬಿಡುವುದಿಲ್ಲ. ಒಬ್ಬ ಗುರುವಿನ ರೂಪದಲ್ಲಿ ಬಂದು ಪ್ರತ್ಯಕ್ಷನಾಗಿ ದಾರಿ ತೋರಿಸುತ್ತಾನೆ. ನಿಮ್ಮ ಭವ್ಯ ಭವಿಷ್ಯದ ಕನಸು ನಾನಸಾಗಲು ಆಚಾರ್ಯ ಶ್ರೀವಿಜೇಂದ್ರ ಗೂರುಜಿ ಅವರನ್ನು ಸಂಪರ್ಕಿಸಿ, ಅಪಾರಜ್ಞಾನ ವಾಕ್ ಸಿದ್ಧಿ, ಮಂತ್ರಸಿದ್ಧಿಯಿಂದ ಜನರಲ್ಲಿ ಪ್ರಶಂಸೆ, ಪಡೆದಿದ್ದಾರೆ ಹಾಗೂ ಸಾವಿರಾರು ಜನರಿಗೆ ಸಾರ್ಥಕ ಪರಿಹಾರ ನಿಡಿದ ಕೀರ್ತಿ ಪಡೆದಿದ್ದಾರೆ. ಇದು ನಿಜ ಬದುಕಿನ ದಾರಿ ದೀಪ ಇಂದೆ ಸಂಪರ್ಕಿಸಿರಿ ಶ್ರೀ ಕಟೀಲ ಶ್ರೀ ದುರ್ಗೆ ಪರಮೇಶ್ವರಿ ದೇವಿ ಆರಾಧಕರು.

ನಿಮ್ಮ ಸಮಸ್ಯೆ ಏನೇ ಇರಲಿ ಅದು ಎಷ್ಟೆ ಕಠಿಣವಾಗಿರಲಿ ಕೆರಳ ಅರ್ಥವಣವೇದದ ಅಮಾವಾಸ್ಯೆ ಹುಣ್ಣಿಮೆ, ಗ್ರಹಣಕಾಲದ ಬ್ರಹ್ಮ-ತಂತ್ರ ವಿದ್ಯೆಗಳಿಂದ 100ಕ್ಕೆ 100 ರಷ್ಟು ಶಾಶ್ವತ ಪರಿಹಾರ ಕಲ್ಪಿಸಲಾಗುವುದು..

ನಿಮ್ಮ ಸಮಸ್ಯೆಗೊಂಡ : ಮಾನಸಿಕ ನೆಮ್ಮದಿ ಇಲ್ಲದಿರುವುದು ಮನೆಯಲ್ಲಿ ಅಶಾಂತಿ, ದುಷ್ಟಶಕ್ತಿ ತೊಂದರೆ, ಮಕ್ಕಳ ಅಸಭ್ಯ, ವರ್ತನೆ, ವಿದ್ಯಾಭ್ಯಾಸ ಹಿನ್ನಡೆ ವ್ಯಾಪಾರ-ಉದ್ಯೋಗನಷ್ಟ ಮದುವೆ ವಿಳಂಭ ಪ್ರೇಮವಿಚಾರ, ದಾಂಪತ್ಯ-ಕಲಹ, ಡೈವರ್ಸ್ ತೊಂದರೆ, ಸಂತಸ ಲೈಂಗಿಕ ತೊಂದರೆ ಆರೋಗ್ಯ ಸಮಸ್ಯೆ, ಕೊಡೆಕೇಸ್, ಆಸ್ತಿವಿಚಾರ, ಶತ್ರುಕಾಟ, ಮಾಟ-ಮಂತ್ರ, ವಶೀಕರಣ ನಿವಾರಣೆ ಅತ್ತೆ-ಸೊಸೆ-ಕಲಹ, ಹಣಕಾಸಿನ ಸಮಸ್ಯೆ, ಇನ್ನುಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದು ಇನ್ನೊಬರ ಬಳಿ ಹೇಳಲಾಗದೆ, ಮನಸ್ಸಿನಲ್ಲಿ ಕೊರಗುತ್ತಿದ್ದರೆ ಚಿಂತಿಸಬೇಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಸಿದ್ಧ.

ವಿ.ಸೂ. : ಬಹಳ ವಯಸ್ಸಾಗಿದ್ದರು ಮದುವೆ ಆಗದೆ ಬಳಲುತ್ತಿರುವ ವಧು-ವರರಿಗೆ ಅತಿ ಶೀಘ್ರವಾಗಿ ವಿವಾಹ ಪ್ರಾಪ್ತಿ ಆಗಲು ವಿಶೇಷ ಪರಿಹಾರ ಮಾಡಿಕೊಡುತ್ತೇವೆ.

**ದೂರದ ಊರಿನವರಿಗೆ ದೂರವಾಣಿ ಮೂಲಕ ಪರಿಹಾರ ತಿಳಿಸುತ್ತೇವೆ.**

**99452 22228**

**ಸ್ಥಳ : ಶ್ರೀ ಕ್ಷೇತ್ರ ಮಂತ್ರಾಲಯ,**

**ಶ್ರೀ ಗುರುರಾಘವೇಂದ್ರ ಜ್ಯೋತಿಷ್ಯ–ಸಲಹೆ– ಪರಿಹಾರ ಕೇಂದ್ರ ॥**

ನಂ 157, 1ನೇ ಮಹಡಿ, ಶ್ರೀರಾಮ ಪ್ಲಾಜಾ, ಸತೀಶ್ ಸ್ಟೋರ್ ಎದುರು,
ಡಿ.ವಿ.ಜಿ. ರೋಡ್, ಬಸವನಗುಡಿ, ಬೆಂಗಳೂರು
ಬರುವ ಮೊದಲು ದೂರವಾಣಿ ಮೂಲಕ ಭೇಟಿಮಾಡಿ ಸಮಯವನ್ನು ಖಚಿತ ಪಡಿಸಿಕೊಂಡು ಬನ್ನಿ
ಸಮಯ : ಬೆಳಗ್ಗೆ 11.00 ರಿಂದ ರಾತ್ರಿ 9.00ರ ವರೆಗೆ



ಶ್ರೀ ಗಣೇಶ ಶಾರದಾ ಗುರುಭ್ಯೋ ನಮಃ

# ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾಗಿ ಶ್ರೀ ಅಶೋಕ ಹಾರನಹಳ್ಳಿ ಅಧಿಕಾರ ಸ್ವೀಕಾರ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ಮಾಜಿ ಅಡ್ವೋಕೇಟ್ ಜನರಲ್ ಶ್ರೀ ಅಶೋಕ ಹಾರನಹಳ್ಳಿ ಅವರು ಗುರುವಾರ ಸಂಜೆ 06–01–2022ರಂದು ಮಹಾಸಭಾದ ಕೇಂದ್ರ ಕಛೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು.

ಇದಕ್ಕೂ ಮುನ್ನ ಮಹಾಸಭಾದ ಕಾರ್ಯಾಲಯದದಲ್ಲಿ ಶ್ರೀ ಸದ್ಗುರುಗಳ ಪಾದುಕಾ ಪೂಜೆ ಮತ್ತು ಉದಕಶಾಂತಿಯುಕ್ತ ಧಾರ್ಮಿಕ ವಿಧಿ ವಿಧಾನಗಳು ನೆರವೇರಿದವು. ಈ ಸಂದರ್ಭದಲ್ಲಿ ಬಸವನಗುಡಿ ಕ್ಷೇತ್ರದ ಶಾಸಕ ರವಿಸುಬ್ರಹ್ಮಣ್ಯ, ಚಿಕ್ಕಪೇಟೆ ಶಾಸಕ ಉದಯ್ ಗರುಡಾಚಾರ್, ಬೆಂಗಳೂರಿನ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ಬಿಬಿಎಂಪಿ ಮಾಜಿ ಸದಸ್ಯ ಸಿ.ಕೆ. ರಾಮಮೂರ್ತಿ ಸೇರಿದಂತೆ ಸಮಾಜದ ಅನೇಕ ಹಿರಿಯ ಮುಖಂಡರು ಹಾಗೂ ಅಸಂಖ್ಯಾತ ಅಭಿಮಾನಿಗಳು ಉಪಸ್ಥಿತರಿದ್ದರು.

ಡಿಸೆಂಬರ್ 12 ಮತ್ತು 19ರಂದು ನಡೆದ ಮಹಾಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ ಅಶೋಕ್ ಹಾರನಹಳ್ಳಿಯವರು ಅಧ್ಯಕ್ಷರಾಗಿ ಆಯ್ಕೆಯಾಗಿರುವ ಬಗ್ಗೆ ಚುನಾವಣಾ ಅಧಿಕಾರಿಗಳು ಡಿಸೆಂಬರ್ 19 ರಂದು ಪ್ರಕಟಿಸಿದ ಫಲಿತಾಂಶದ ಪ್ರಕಟಣೆಯನ್ನು ಬ್ರಾಹ್ಮಣ ಮಹಾಸಭಾದ ಹಿರಿಯ ಮುಖಂಡ ಹೆಚ್.ಎನ್. ಹಿರಿಯಣ್ಣಸ್ವಾಮಿ ಓದಿ ದಾಖಲು ಮಾಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಂಸ್ಥಾಪಕ ಸದಸ್ಯರೂ, ಮಾಜಿ ಅಧ್ಯಕ್ಷರೂ, ಗಾಯನ ಸಮಾಜದ ಅಧ್ಯಕ್ಷರೂ ಆದ ಡಾ॥ ಎಂ.ಆರ್.ವಿ. ಪ್ರಸಾದ್ ಹಾಗೂ ಮಂಕುತಿಮ್ಮನ ಕಗ್ಗ ಗಮಕ ಖ್ಯಾತಿಯ ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ನೂತನ ಅಧ್ಯಕ್ಷರನ್ನು ಸನ್ಮಾನಿಸಿ ಅಭಿನಂದಿಸಿದರು.

ಅಧ್ಯಕ್ಷ ಪದವಿಯನ್ನು ಅಧಿಕಾರ ಎಂದು ತಾನು ಎಂದೂ ಭಾವಿಸುವುದಿಲ್ಲ. ಸಮಾಜದ ಸೇವೆಗೆ ಸಿಕ್ಕಿರುವ ಹೊಸ ಹೊಣೆಗಾರಿಕೆಯಾಗಿದೆ. ಇದನ್ನು ಯಶಸ್ವಿಯಾಗಿ ನಿಭಾಯಿಸಲು ಸಮಾಜಬಾಂಧವರ ಸಹಕಾರ ಅತಿ ಮುಖ್ಯವಾಗಿದ್ದು, ಮಹಾಸಭಾದ ಸರ್ವತೋಮುಖ ಅಭಿವೃದ್ಧಿಗೆ–ಉನ್ನತಿಗೆ ಎಲ್ಲರೂ ಸಹಕರಿಸಬೇಕೆಂದು ವಿನಂತಿಸಿದರು.

PERIODICAL RATE
VIPRANUDI KANNADA MONTHLY. Postal Regn. No. RNP/KA/BGS/2275/
& RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-02-2022 Date of Publishing 10-02-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :
VIPRANUDI
Akhila Karnataka Brahmana Mahasabha (R.)
"Gayathri Bhavana", No. 3070, 9th Main Road
Gayathri Bhavana Road, (14th Cross) BSK 2nd Stage
BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R)
"Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070.
And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar